ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 155 RNI Number : KNKAN/25/A2770 13-06-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :155 ರಾಯಚೂರು 13-06-2026 ಶನಿವಾರ ಪುಟ 04 ಬೆಲೆ ರೂ.2/- ಮೊ:8660146563

ವೈದ್ಯಕೀಯ ವಿದ್ಯಾರ್ಥಿಗಳಿಗೆ ಹೊಸದಾಗಿ ಶುಲ್ಕ ಹೆಚ್ಚಳ ಇಲ್ಲ

ಬೆಂಗಳೂರು: ವೈದ್ಯಕೀಯ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರ ಸಿಹಿ ಸುದ್ದಿ ಕೊಟ್ಟಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ವೈದ್ಯಕೀಯ, ದಂತ ವೈದ್ಯಕೀಯ, ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳ ಶುಲ್ಕವನ್ನು ಹೆಚ್ಚಳ ಮಾಡದೇ ಯಥಾಸ್ಥಿತಿಯನ್ನೇ ಮುಂದುವರೆಸುವ ಮಹತ್ವದ ತೀರ್ಮಾನವನ್ನು ರಾಜ್ಯ ಸರ್ಕಾರ ತೆಗೆದುಕೊಂಡಿದೆ.

ಸರ್ಕಾರದ ಇಂತಹ ನಿರ್ಧಾರದಿಂದಾಗಿ ಈ ಬಾರಿ ವೈದ್ಯಕೀಯ, ದಂತ ವೈದ್ಯಕೀಯ, ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳ ಶುಲ್ಕ ಹಚ್ಚಳವಾಗುತ್ತದೆ ಎಂಬ ಆತಂಕದಲ್ಲಿದ್ದ ವಿದ್ಯಾರ್ಥಿಗಳು ಹಾಗೂ ಪೋಷಕರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ. ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜು ಆಡಳಿತ ಮಂಡಳಿಯವರೊಂದಿಗೆ ಶುಕ್ರವಾರ ವಿಕಾಸಸೌಧದಲ್ಲಿ ನಡೆದ ಸಭೆಯಲ್ಲಿ ಈ ಮಹತ್ವದ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ಶುಲ್ಕವನ್ನು ಹೆಚ್ಚಳ ಮಾಡಬೇಕೆಂಬ ಪ್ರಸ್ತಾವನೆಯನ್ನು ನಾವು ಒಪ್ಪಿಕೊಂಡಿಲ್ಲ. ಈ ಹಿಂದೆ ಅಂದರೆ 2025-26ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿದ್ದ ಶುಲ್ಕವು ಯಥಾಸ್ಥಿತಿಯಲ್ಲೇ ಮುಂದುವರೆಯಲಿದೆ ಎಂದು ಸ್ಪಷ್ಟಪಡಿಸಿದರು.

ಪೋಷಕರು ಮತ್ತು ವಿದ್ಯಾರ್ಥಿಗಳು ಶುಲ್ಕ ಹೆಚ್ಚಳವಾಗುತ್ತದೆ ಎಂಬ ಆತಂಕಕ್ಕೆ ಒಳಗಾಗಬಾರದು. ಈಗಾಗಲೇ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಾತಿಗೆ ನಡೆದಿದ್ದ ನೀಟ್ ಪ್ರವೇಶ ಪರೀಕ್ಷೆ ರದ್ದಾಗಿ ಮರುಪರೀಕ್ಷೆ ನಡೆಯಬೇಕಿರುವುದರಿಂದ ಒತ್ತಡಕ್ಕೆ ಒಳಗಾಗಿದ್ದಾರೆ. ಇಂತಹ ಸಮಯದಲ್ಲಿ ಶುಲ್ಕ ಹೆಚ್ಚಳ ಮಾಡುವುದು ಸರಿಯಲ್ಲ ಎಂಬ ತೀರ್ಮಾನ ಮಾಡಲಾಗಿದೆ ಎಂದರು.

ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜು ಮಂಡಳಿಯವರು ಶುಲ್ಕ ಹೆಚ್ಚಳ ಮಾಡುವ ಪ್ರಸ್ತಾವನೆಗೆ ನಾವು ಅವಕಾಶವನ್ನೇ ಕೊಟ್ಟಿಲ್ಲ. ಹೀಗಾಗಿ ವಿದ್ಯಾರ್ಥಿಗಳು ಮತ್ತು ಪೋಷಕರು ಯಾವುದೇ ರೀತಿಯ ಊಹಾಪೋಹಕ್ಕೆ ಕಿವಿಗೊಡಬಾರದು ಎಂದು ಸಚಿವ ಶರಣಪ್ರಕಾಶ್ ಪಾಟೀಲ್ ಮನವಿ ಮಾಡಿದರು.

ಕಳೆದ ಸಾಲಿನಲ್ಲಿ ನಿಗದಿಪಡಿಸಿದ್ದ ಶುಲ್ಕವನ್ನೇ ಈ ಸಾಲಿನಲ್ಲೂ ಮುಂದುವರೆಸಲಾಗುವುದು. ಈ ನಿಯಮವು ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳೆರಡಕ್ಕೂ ಅನ್ವಯಿಸುತ್ತದೆ. ಈ ನಿರ್ಧಾರದಿಂದಾಗಿ ಪ್ರವೇಶ ಪಡೆಯಲಿರುವ ವಿದ್ಯಾರ್ಥಿಗಳಿಗೆ ಆರ್ಥಿಕ ಹೊರೆ ತಪ್ಪಿದಂತಾಗಿದೆ.



ಡೆಂಟಲ್‌ಗೆ ಶುಲ್ಕ ಏರಿಕೆ ಮಾಡುವಂತೆ ಕೋರಿದ್ದರು. ಆದರೆ, ನಾವು ಅದನ್ನು ನಿರಾಕರಿಸಿದ್ದೇವೆ. ವೈದ್ಯಕೀಯ ಕಾಲೇಜುಗಳು ಒಪ್ಪಿಕೊಂಡಿದ್ದಾರೆ. ನೀಟ್ ಪೇಪರ್ ಲೀಕ್‌ನಿಂದ ಮಕ್ಕಳು ಆತಂಕದಲ್ಲಿದ್ದಾರೆ. ಹಾಗಾಗಿ ಅವರಿಗೆ ಹೊರೆ ಆಗುವುದು ಬೇಡ ಅಂತ ಈ ತೀರ್ಮಾನ ಮಾಡಲಾಗಿದೆ. ಕಳೆದ ವರ್ಷನೂ ಶುಲ್ಕ ಏರಿಕೆ ಮಾಡಲಾಗಿಲ್ಲ ಎಂದು ತಿಳಿಸಿದರು.

ಎಂಬಿಬಿಎಸ್ ಶುಲ್ಕ ವಿವರ:
ಸರ್ಕಾರಿ ಕಾಲೇಜು – 55,000 ರೂ.
ಕೆಪಿಸಿಎಫ್ ಸರ್ಕಾರಿ ಕೋಟಾ – 1,41,621 ರೂ.
ಕೆಆರ್‌ಎಲ್‌ಎಂಪಿಸಿಎ ಸರ್ಕಾರಿ ಕೋಟಾ – 1,41,621 ರೂ.
ಎಎಂಪಿಸಿಕೆ ಸರ್ಕಾರಿ ಕೋಟಾ – 1,41,621 ರೂ.
ಖಾಸಗಿ ವಿಶ್ವವಿದ್ಯಾನಿಲಯ:
ಸರ್ಕಾರಿ ಕೋಟಾ 1,41,621 ರೂ.
ಕೆಪಿಸಿಎಫ್ ಖಾಸಗಿ ಕೋಟಾ – 11,88,167 ರೂ.
ಕೆಆರ್‌ಎಲ್‌ಎಂಪಿಸಿಎ ಖಾಸಗಿ ಕೋಟಾ – 11,88,167 ರೂ.
ಎಎಂಪಿಸಿಕೆ ಖಾಸಗಿ ಕೋಟಾ – 11,88,167 ರೂ.
ದಂತ ವೈದ್ಯಕೀಯ:
ಸರ್ಕಾರಿ ಕಾಲೇಜುಗಳ ಕೋಟಾ – 40,000 ರೂ.
ಕೆಪಿಸಿಎಫ್ ಸರ್ಕಾರಿ ಕೋಟಾ – 83,358 ರೂ.
ಕೆಆರ್‌ಎಲ್‌ಎಂಪಿಸಿಎ ಸರ್ಕಾರಿ ಕೋಟಾ – 83,358 ರೂ.
ಎಎಂಪಿಸಿಕೆ ಸರ್ಕಾರಿ ಕೋಟಾ – 83,358 ರೂ.
ಖಾಸಗಿ ಕೋಟ:
ಕೆಪಿಸಿಎಫ್ ಖಾಸಗಿ ಕೋಟಾ – 7,32,625 ರೂ.
ಕೆಆರ್‌ಎಲ್‌ಎಂಪಿಸಿಎ ಖಾಸಗಿ ಕೋಟಾ – 7,32,625 ರೂ.

3ನೇಯ ಪುಟಕ್ಕೆ

ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ ಆಚರಣೆ



ರಾಯಚೂರು, ಜೂ.12–
ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆಯ ಅಂಗವಾಗಿ ಇಂದು ಶಾಖವಾದಿ ಗ್ರಾಮ ಪಂಚಾಯತಿ ವತಿಯಿಂದ ಜಾಗೃತಿ ಕಾರ್ಯಕ್ರಮ ವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನೆ, ಮಕ್ಕಳಿಗೆ ಶಿಕ್ಷಣದ ಮಹತ್ವ ಹಾಗೂ ಮಕ್ಕಳ ಹಕ್ಕುಗಳ ಕುರಿತು ಅರಿವು ಮೂಡಿ ಸಲಾಯಿತು.

ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿ ಅಧಿಕಾರಿಗಳಾದ ಪಿಡಿಒ, ಸರ್ಕಾರಿ ಹಿರಿಯ ಪ್ರಾಥ ಮಿಕ ಶಾಲೆಯ ಮುಖ್ಯಗುರುಗಳು, ಶಿಕ್ಷಕರು ಹಾಗೂ ಶಾಲಾ ಮಕ್ಕಳು ಭಾಗವಹಿಸಿದರು. ಕಾರ್ಯಕ್ರಮ ವನ್ನು ಕ್ರೈಸ್ ಸಂಸ್ಥೆ ರಾಯಚೂರು ಇವರ ಸಹಯೋಗದಲ್ಲಿ ಆಯೋಜಿ ಸಲಾಗಿತ್ತು.

ಕ್ರೈಸ್ ಸಂಸ್ಥೆಯ ತಾಲೂಕು ಸಂಯೋಜಕರಾದ ಮಲ್ಲೇಶ್ ಹಾಗೂ ಅಮರಮ್ಮ ಅವರು ಕಾರ್ಯಕ್ರಮವನ್ನು ಸಂಯೋಜಿಸಿ ಮಕ್ಕಳಲ್ಲಿ ಶಿಕ್ಷಣದ ಅರಿವು ಮತ್ತು ಬಾಲಕಾರ್ಮಿಕ ಪದ್ಧತಿಯ ವಿರುದ್ಧ ಜಾಗೃತಿ ಮೂಡಿಸಿದರು.

ಕಾರ್ಯಕ್ರಮದ ಅಂತ್ಯದಲ್ಲಿ ಬಾಲಕಾರ್ಮಿಕ ಮುಕ್ತ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈ ಜೋಡಿಸುವಂತೆ ಕರೆ ನೀಡಲಾಯಿತು.

ರುದ್ರಪ್ಪ ಲಮಾಣಿಗೆ ಸಚಿವ ಸ್ಥಾನ ನೀಡಲು ಆಗ್ರಹಿಸಿ ಬಂಜಾರ ಸಮಾಜದ ಬೃಹತ್ ಪ್ರತಿಭಟನೆ

ರಾಯಚೂರು, ಜೂ.12
ರಾಜ್ಯ ಸಚಿವ ಸಂಪುಟದಲ್ಲಿ ಹಾವೇರಿ ಕ್ಷೇತ್ರದ ಕಾಂಗ್ರೆಸ್ ಶಾಸಕ ರುದ್ರಪ್ಪ ಎಂ. ಲಮಾಣಿ ಅವರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ಆಲ್ ಇಂಡಿಯಾ ಬಂಜಾರ ಸೇವಾ ಸಂಘ (ಎಐಬಿಎಸ್‌ಎಸ್) ಜಿಲ್ಲಾ ಘಟಕದ ನೇತೃತ್ವದಲ್ಲಿ ಇಂದು ನಗರದ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಲ್‌ನಲ್ಲಿ ಬಂಜಾರ ಸಮಾಜದ ವತಿಯಿಂದ ಬೃಹತ್ ಪ್ರತಿಭಟನೆ ನಡೆಯಿತು.

ಪ್ರತಿಭಟನೆಗೂ ಮುನ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ ಮೂರ್ತಿಗೆ ಮಾಲಾರ್ಪಣೆ ಸಲ್ಲಿಸಿ ಗೌರವ ನಮನ ಸಲ್ಲಿಸಲಾಯಿತು. ಎಐಬಿಎಸ್‌ಎಸ್ ಜಿಲ್ಲಾ ಪ್ರದಾನ್ ಕಾರ್ಯದರ್ಶಿ ಎನ್. ಶಿಪ್ಲಾ ಪವಾರ್ ಅವರ ನೇತೃತ್ವದಲ್ಲಿ ನಡೆದ



ಪ್ರತಿಭಟನೆಯಲ್ಲಿ ಸಮಾಜದ ಮುಖಂಡರು ಹಾಗೂ ಕಾರ್ಯಕರ್ತರು ಸರ್ಕಾರ ಮತ್ತು ಕಾಂಗ್ರೆಸ್ ಹೈಕಮಾಂಡ್‌ಗೆ ಬಂಜಾರ ಸಮಾಜಕ್ಕೆ ಸಚಿವ ಸಂಪುಟದಲ್ಲಿ ಸಮರ್ಪಕ ಪ್ರಾತಿನಿಧ್ಯ ನೀಡುವಂತೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡರು, ರಾಜ್ಯದಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಬಂಜಾರ ಸಮಾಜಕ್ಕೆ ರಾಜಕೀಯವಾಗಿ ನ್ಯಾಯಸಮ್ಮತ ಸ್ಥಾನಮಾನ ಕಲ್ಪಿಸಬೇಕು ಎಂದು ಆಗ್ರಹಿಸಿದರು. ರುದ್ರಪ್ಪ ಲಮಾಣಿ ಅವರು ಪಕ್ಷ ಸಂಘಟನೆ, ಜನಪರ ಕಾರ್ಯ ಹಾಗೂ ಆಡಳಿತ ಅನುಭವ ಹೊಂದಿದ್ದು ಸಚಿವ ಸ್ಥಾನಕ್ಕೆ ಅರ್ಹರಾಗಿದ್ದಾರೆ ಎಂದು ತಿಳಿಸಿದರು.

ಅವರು, ಹಾವೇರಿ ಜಿಲ್ಲೆಯ ಏಕೈಕ ಕಾಂಗ್ರೆಸ್ ಶಾಸಕರಾಗಿ ಆಯ್ಕೆಯಾಗಿರುವ ರುದ್ರಪ್ಪ ಲಮಾಣಿ ಅವರು ಪಕ್ಷ ಸಂಘಟನೆ, ಜನಸೇವೆ ಹಾಗೂ ಆಡಳಿತ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿದ್ದು ಸಚಿವ ಸ್ಥಾನಕ್ಕೆ ಅರ್ಹರಾಗಿದ್ದಾರೆ ಎಂದು ಹೇಳಿದರು.

ಇದೇ ವೇಳೆ, ರುದ್ರಪ್ಪ ಲಮಾಣಿ ಅವರು ಈ ಹಿಂದೆ ವಿಧಾನಸಭೆಯ ಉಪಸಭಾಪತಿಯಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದು, ಬಡವರು, ರೈತರು, ಕಾರ್ಮಿಕರು ಹಾಗೂ ಹಿಂದುಳಿದ ವರ್ಗಗಳ ಪರವಾಗಿ ನಿರಂತರವಾಗಿ ಕೆಲಸ ಮಾಡಿದ್ದಾರೆ ಎಂದು ಹೇಳಿ, ಅವರ ಸೇವೆಯನ್ನು ಪರಿಗಣಿಸಿ ಸಚಿವ ಸ್ಥಾನ ನೀಡಬೇಕು ಹಾಗೂ ಉಪಮುಖ್ಯಮಂತ್ರಿ ಹುದ್ದೆಯನ್ನೂ ನೀಡುವ ಬಗ್ಗೆ ಸರ್ಕಾರ ಚಿಂತನೆ ನಡೆಸಬೇಕು ಎಂದು ಆಗ್ರಹಿಸಿದರು.

3ನೇಯ ಪುಟಕ್ಕೆ

ಮುಂಗಾರಿಗೆ ಸಜ್ಜು: ಬೀಜ-ಗೊಬ್ಬರ ಕೊರತೆಯಾಗದಂತೆ ದದ್ದಲ್ ಖಡಕ್ ಸೂಚನೆ

ರಾಯಚೂರು, ಜೂ.12–
ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳಿಗೆ ಅಗತ್ಯವಾಗಿರುವ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ಸಮರ್ಪಕ ಲಭ್ಯತೆ ಮತ್ತು ವಿತರಣೆಯನ್ನು ಖಚಿತಪಡಿಸಿಕೊಳ್ಳುವಂತೆ ಶಾಸಕ ಬಸನಗೌಡ ದದ್ದಲ್ ಅಧಿಕಾರಿಗಳಿಗೆ ಸೂಚನೆ ನೀಡಿದರು.



ನಗರದ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರೈತರಿಗೆ ಯಾವುದೇ ಹಂತದಲ್ಲೂ ಬೀಜ ಮತ್ತು ಗೊಬ್ಬರ ಕೊರತೆ ಉಂಟಾಗದಂತೆ ಕೃಷಿ ಇಲಾಖೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಕೃಷಿ ಇಲಾಖೆ ಅಧಿಕಾರಿಗಳು ಮುಂಗಾರು ಹಂಗಾಮಿಗೆ ಅಗತ್ಯವಿರುವ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಲಭ್ಯತೆ ಕುರಿತು ಮಾಹಿತಿ ನೀಡಿದರು. ಇದೇ ವೇಳೆ ಆಧಾರಿತ ಯೂರಿಯಾ ವಿತರಣೆಯ ಜಾಗೃತಿ ಕರಪತ್ರವನ್ನು ಶಾಸಕ ಬಸನಗೌಡ ದದ್ದಲ್ ಬಿಡುಗಡೆ ಮಾಡಿದರು. ರೈತರಿಗೆ ಅವರ ಹಿಡುವಳಿ ಆಧಾರದ ಮೇಲೆ ಪ್ರತಿ ಎಕರೆಗೆ ಒಂದು ಚೀಲ ಯೂರಿಯಾ ವಿತರಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ಕುಡಿಯುವ ನೀರಿನ ಯೋಜನೆಗಳ ಪ್ರಗತಿ ಪರಿಶೀಲನೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಪ್ರಗತಿ ಪರಿಶೀಲನೆ ವೇಳೆ ಮಟಮಾರಿ ಗ್ರಾಮದಲ್ಲಿ ಒಎಚ್‌ಟಿ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ತಕರಾರು ಕುರಿತು ಚರ್ಚೆ ನಡೆಯಿತು. ದಾಖಲೆಗಳನ್ನು ಪರಿಶೀಲಿಸಿ ಅನಗತ್ಯ ತೊಂದರೆ ಉಂಟುಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಶಾಸಕರು ಸೂಚಿಸಿದರು.

ಜಿಲ್ಲೆಯಲ್ಲಿ ನಡೆಯುತ್ತಿರುವ 8 ಕಾಮಗಾರಿಗಳ ಪೈಕಿ 4 ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಜೊತೆಗೆ 73 ಒಎಚ್‌ಟಿ ಕಾಮಗಾರಿಗಳ ಪೈಕಿ 20 ಪೂರ್ಣಗೊಂಡಿದ್ದು, 41 ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ತಿಳಿಸಿದರು.

3ನೇಯ ಪುಟಕ್ಕೆ

ಅನರ್ಹರ ನೇಮಕಾತಿ ಅಧಿಸೂಚನೆ ಹಿಂತೆಗೆದುಕೊಳ್ಳಲು ಜೆ.ಬಿ. ರಾಜ್ ಆಗ್ರಹ



ರಾಯಚೂರು, ಜೂ.12–
ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಅಧ್ಯಕ್ಷರು ಹಾಗೂ ಸದಸ್ಯರಾಗಿ ನೇಮಕಗೊಂಡಿರುವ ಕೆಲವರು ಕಾನೂನಿನ ಪ್ರಕಾರ ನಿಗದಿಪಡಿಸಿದ ಅರ್ಹತಾ ಮಾನದಂಡಗಳನ್ನು ಪೂರೈಸಿಲ್ಲ ಎಂಬ ಆರೋಪದ ಹಿನ್ನೆಲೆ, 2026ರ ಮೇ 27ರಂದು ಹೊರಡಿಸಲಾದ ನೇಮಕಾತಿ ಅಧಿಸೂಚನೆಯನ್ನು ತಕ್ಷಣ ಹಿಂತೆಗೆದುಕೊಳ್ಳಬೇಕು ಎಂದು ಜನಪರ ಸಂಘಟನೆಗಳ ವೇದಿಕೆಯ ರಾಜ್ಯ ಮುಖಂಡ ಜೆ.ಬಿ. ರಾಜ್ ಒತ್ತಾಯಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳ ಕಾಯ್ದೆ 2005ರ ಅಡಿಯಲ್ಲಿ ಕಾರ್ಯನಿರ್ವಹಿಸುವ ಕಾನೂನುಬದ್ಧ ಸಂಸ್ಥೆಯಾಗಿದ್ದು, ಮಕ್ಕಳ ಹಕ್ಕುಗಳು, ಕಲ್ಯಾಣ ಮತ್ತು ರಕ್ಷಣೆಗೆ ಸಂಬಂಧಿಸಿದ ನೀತಿ ಹಾಗೂ ಕಾರ್ಯಕ್ರಮಗಳ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುವ ಮಹತ್ವದ ಹೊಣೆಗಾರಿಕೆ ಹೊಂದಿದೆ ಎಂದು ಹೇಳಿದರು.

3ನೇಯ ಪುಟಕ್ಕೆ

ಬಳಗಾನೂರು ಪೊಲೀಸರ ಯಶಸ್ವಿ ಕಾರ್ಯಾಚರಣೆ
05 ಜನ ಆರೋಪಿತರಿಂದ 35.20 ಲಕ್ಷ ಬೆಲೆ ಬಾಳುವ ಸಾವಿರ ಬೆಲೆ ಬಾಳುವ 50 ಮೋಟರ್ ಸೈಕಲ್ ಜಪ್ತಿ

ಸಿಂಧನೂರು,ಜೂ.12–
ಮಸ್ಕಿ ತಾಲೂಕಿನ ಬಳಗಾನೂರ ಪೋಲೀಸ್ ಠಾಣೆ ಕ್ರೈಂ ನಂಬರ್ 21-26 ಪಿಎಸ್‌ಐ ಎರಿಯಪ್ಪ ಅವರು ಕಳ್ಳ ಯಾಗಿರವ 50 ಬೈಕ್ ಗಳು ಪತ್ತೆ ಹಚ್ಚಿ ಉತ್ತಮ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ್ದಾರೆ. ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದರು



ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ದಿನಾಂಕ : 30.01.2026 ರಂದು ಮಧ್ಯರಾತ್ರಿಯಲ್ಲಿ ಮನೆ ಮುಂದೆ ನಿಲ್ಲಿಸಿದ ಹನುಮನಗೌಡ ಕ್ಯಾತನಟ್ಟಿರವರ ರಾಯಲ್ ಎನ್ ಫೀಲ್ಡ್ ಬೈಕ್ ನಂಬರ್ ಕೆಎ-01 ಜೆಎ-6770 ನೇದ್ದನ್ನು ಯಾರೋ ಕಳ್ಳರೂ ಕಳ್ಳವು ಮಾಡಿಕೊಂಡು ಹೋಗಿದ್ದು, ಈ ಬಗ್ಗೆ ಬಳಗಾನೂರು ಪೊಲೀಸ್ ಠಾಣೆ ಗುನ್ನೆ ನಂ: 21/2026 ಕಲಂ 303(2) ಬಿಎನ್ ಎಸ್ ರೀತ್ಯಾ ಪ್ರಕರಣ ದಾಖಲಾಗಿದ್ದು ಇರುತ್ತದೆ ಎಂದು ತಿಳಿಸಿದರು

ಸದರಿ ಪ್ರಕರಣ ಬೇದಿಸಲು ಅರುಣಾಂಗ್ಸು ಗಿರಿ ಐಪಿಎಸ್. ಪೊಲೀಸ್ ಅಧೀಕ್ಷಕರು, ರಾಯಚೂರು ಮತ್ತು .ಎಸ್.ಜೆ ಕುಮಾರಸ್ವಾಮಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕರು-1,

.ಜಿ.ಹರೀಶ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರು-2, ರಾಯಚೂರು ರವರು ಹಾಗೂ

3ನೇಯ ಪುಟಕ್ಕೆ

ಆನ್ವರಿ ಗ್ರಾಮಸ್ಥರಿಂದ ಮೂಲಭೂತ ಸೌಕರ್ಯಕ್ಕಾಗಿ ಗ್ರಾಮ ಪಂಚಾಯಿತಿಗೆ ಮುತ್ತಿಗೆ ಹಾಕಿ ಪ್ರತಿಭಟನೆ

ಹಟ್ಟಿ ಚಿನ್ನದ ಗಣಿ:
ಆನ್ವರಿ ಗ್ರಾಮ ಪಂಚಾಯಿತಿಯಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಹೋಳೆತ್ತುವ ಕಾಮಗಾರಿ ನಿರ್ವಹಿಸಿದ ಕಾರ್ಮಿಕರಿಗೆ 340 ರೂ ವೇತನ,ಕೆಲಸ ನಿರ್ವಹಿಸದೆ ಇರುವ ಕಾರ್ಮಿಕರಿಗೆ 299 ರೂ ವೇತನ ಪಾವತಿಸಿ ಮೋಸಮಾಡಿದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ()ವೆಂಕೋಬ ನಡೆಯನ್ನು ಖಂಡಿಸಿ ಹತ್ತಾರು ಕೂಲಿ ಕಾರ್ಮಿಕರು ಆನ್ವರಿ ಗ್ರಾಮ ಪಂಚಾಯಿತಿಗೆ.ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದ ಘಟನೆ ಮಂಗಳವಾರ ನಡೆಯಿತು.



ಲಿಂಗಸಗೂರ ತಾಲೂಕಿನ ಆನ್ವರಿ ಗ್ರಾಮ ಪಂಚಾಯಿತಿಗೆ ಒಳಪಡುವ ಹೊಸೂರು, ಚುಕ್ಕನಟ್ಟಿ,ಹಿರೇನಗನೂರ,ಆನ್ವರಿ ಸೇರಿದಂತೆ ಜನಸಂಖ್ಯೆ ಹಾಗೂ ಮತಗಳ ಅನುಗುಣವಾಗಿ ಅಧ್ಯಕ್ಷರನ್ನೊಳಗೊಂಡು 24 ಸದಸ್ಯರ ಒಂದು ಗ್ರಾಮ ಪಂಚಾಯಿತಿ ಆನ್ವರಿ.ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಸದಸ್ಯರ ಅಧಿಕಾರಾವಧಿ ಮುಗಿದ ನಂತರ ಗ್ರಾಮ ಪಂಚಾಯಿತಿ ಆಡಳಿತ ಅಧಿಕಾರಿಯಾಗಿ ನೇಮಕಗೊಂಡ ಮಾರ್ಟಿನ್ ರವರು ಗ್ರಾಮ ಪಂಚಾಯತಿಯ ಎಲ್ಲಾ ಕೆಲಸಗಳು ಮತ್ತು ಸಮಸ್ಯೆಗಳು ನಿಭಾಯಿಸುವುದು ಇವರ ಜವಾಬ್ದಾರಿ.

ಕಳೆದ ನಾಲ್ಕು ತಿಂಗಳಿಂದ ಗ್ರಾ.ಪಂಗೆ ಆಗಮಿಸದ ಪಿಡಿಓ ವೆಂಕೋಬ ರವರು ವಾರಕ್ಕೆ ಒಂದು ಬಾರಿ ಮಾತ್ರ ಕಛೇರಿಗೆ ಬಂದು ಹೋಗುತ್ತಾರೆ.ಪಿಡಿಓ ರವರಿಗೆ ಸಾರ್ವಜನಿಕರು, ವಿದ್ಯಾರ್ಥಿಗಳು,ಯುವಜನರು ಹಾಗೂ ಗ್ರಾ.ಪಂ.ಸಿಬ್ಬಂದಿಯವರೇ ದೂರವಾಣಿ ಕರೆ ಮಾಡಿದರೆ ಕರೆಯನ್ನು ಸ್ವೀಕರಿಸುವುದಿಲ್ಲ,ಕಾರಣ ಹೇಳಿದರೆ ಉತ್ತರವಿಲ್ಲ. ತಾಲೂಕ ಅಧಿಕಾರಿಗಳಾದ ನೀವುಗಳು

3ನೇಯ ಪುಟಕ್ಕೆ

ಬಳ್ಳಾರಿ ಗ್ರಾಮೀಣ ವಿಧಾನಸಭಾ ಕ್ಷೇತ್ರ: ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ ಕಾರ್ಯಾಗಾರ

ಮತದಾರರ ಪಾರದರ್ಶಕ ಪಟ್ಟಿ ಸಿದ್ಧತೆಗೆ ಜಿಲ್ಲಾ ಚುನಾವಣಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಸೂಚನೆ



ಬಳ್ಳಾರಿ,ಜೂ.12-

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಮೂಲಕ ಅರ್ಹ ಮತದಾರರನ್ನು ಪಟ್ಟಿಗೆ ಸೇರ್ಪಡೆಗೊಳಿಸುವುದು, ತಪ್ಪುಗಳನ್ನು ತಿದ್ದುಪಡಿ ಮಾಡುವುದು ಹಾಗೂ ಪಾರದರ್ಶಕ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದು ಜಿಲ್ಲಾಡಳಿತದ ಮುಖ್ಯ ಉದ್ದೇಶವಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಆದ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು.

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ, ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಕುರಿತು ಬಳ್ಳಾರಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಮತಗಟ್ಟೆ ಅಧಿಕಾರಿಗಳು, ಮೇಲ್ವಿಚಾರಕರಿಗೆ ನಗರದ ಸರಳಾದೇವಿ ಕಾಲೇಜಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮತದಾರರ ಪಟ್ಟಿಯಲ್ಲಿರುವ ಹೆಸರು, ವಿಳಾಸ, ವಯಸ್ಸು ಮತ್ತು ಭಾವಚಿತ್ರಗಳಲ್ಲಿನ ದೋಷಗಳನ್ನು ಸರಿಪಡಿಸುವುದು. 18 ವರ್ಷ ತುಂಬಿದ ಯುವ ಮತದಾರರನ್ನು ಗುರುತಿಸಿ ಕಡ್ಡಾಯವಾಗಿ ಮತದಾರರ ಪಟ್ಟಿಗೆ ಸೇರ್ಪಡೆ ಮಾಡುವುದು. ಮರಣ ಹೊಂದಿದ, ಕಾಯಂ ಆಗಿ ಬೇರೆಡೆಗೆ ವಲಸೆ ಹೋದ ಮತ್ತು ದ್ವಿಪ್ರತಿ ಹೊಂದಿರುವ ಮತದಾರರ ಹೆಸರುಗಳನ್ನು ನಿಯಮಾನುಸಾರ ಪಟ್ಟಿಯಿಂದ ತೆಗೆದುಹಾಕುವುದು ಎಸ್‌ಐಆರ್ ಪ್ರಕ್ರಿಯೆಯಾಗಿದೆ ಎಂದು ತಿಳಿಸಿದರು.

ಅರ್ಹ ಮತದಾರರು ಚುನಾವಣಾ ಪ್ರಕ್ರಿಯೆಯಿಂದ ವಂಚಿತರಾಗಬಾರದು ಮತ್ತು ಮುಂಬರುವ ಚುನಾವಣೆಗಳನ್ನು ದೋಷಮುಕ್ತ ಮತದಾರರ ಪಟ್ಟಿಯೊಂದಿಗೆ ಎದುರಿಸಬೇಕು ಎಂಬ ಉದ್ದೇಶದಿಂದ ಈ ತರಬೇತಿ ಹಾಗೂ ಕಾರ್ಯಾಗಾರ ಆಯೋಜಿಸಲಾಗುತ್ತಿದೆ ಎಂದರು. ಬಿ.ಎಲ್.ಓ.ಗಳು ಪ್ರತಿಯೊಂದು ಮನೆಗೆ ಖುದ್ದಾಗಿ ಭೇಟಿ ನೀಡಿ ಮಾಹಿತಿ ಪರಿಶೀಲಿಸಬೇಕು. ಯಾವುದೇ ಅರ್ಹ ಮತದಾರರ ಹೆಸರು ಕೈಬಿಟ್ಟು ಹೋಗದಂತೆ ಎಚ್ಚರಿಕೆ ವಹಿಸಬೇಕು. ವೋಟರ್ ಹೆಲ್ಪ್‌ಲೈನ್ ಆಪ್ ಮತ್ತು ಬಿ.ಎಲ್.ಓ ಆಪ್‌ಗಳನ್ನು ಸಮರ್ಪಕವಾಗಿ ಬಳಸಿಕೊಂಡು ಪ್ರಕ್ರಿಯೆಯನ್ನು ವೇಗಗೊಳಿಸಬೇಕು ಎಂದರು.

ವಿಶೇಷ ಪರಿಷ್ಕರಣೆ ಅವಧಿಯಲ್ಲಿ ಫಾರಂ 6-ಹೊಸ ಮತದಾರರ ನೋಂದಣಿಗಾಗಿ, ಫಾರಂ 7-ಮತದಾರರ ಪಟ್ಟಿಯಿಂದ ಹೆಸರು ತೆಗೆದುಹಾಕಲು/ಆಕ್ಷೇಪಣೆ ಸಲ್ಲಿಸಲು, ಫಾರಂ 8-ವಿಳಾಸ ಬದಲಾವಣೆ, ತಿದ್ದುಪಡಿ ಹಾಗೂ ಹೊಸ ಪಿವಿಸಿ ಕಾರ್ಡ್‌ಗಾಗಿ ಇರುವ ನಮೂನೆ ಅರ್ಜಿಗಳನ್ನು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು ಎಂದು ಹೇಳಿದರು. ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯವನ್ನು ಯಾವುದೇ ಲೋಪದೋಷಗಳಿಲ್ಲದೆ, ಅತ್ಯಂತ ಯಶಸ್ವಿಯಾಗಿ ಪೂರ್ಣಗೊಳಿಸಬೇಕು. ಅಗತ್ಯ ವಿರುವ ಪ್ರಮುಖ ಸೂಚನೆಗಳು ಮತ್ತು ತಾಂತ್ರಿಕ ವಿವರಗಳನ್ನು ತರಬೇತಿಯಲ್ಲಿ ಭಾಗವಹಿಸಿದ್ದ ಅಧಿಕಾರಿಗಳು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಅತ್ಯಂತ ಯಶಸ್ವಿಯಾಗಿ ಮತ್ತು ವ್ಯವಸ್ಥಿತವಾಗಿ ಕೈಗೊಳ್ಳಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ, ಅಗತ್ಯ ಮಾಹಿತಿ ಹೊಂದಬೇಕು ಎಂದರು.

ಈ ಸಂದರ್ಭದಲ್ಲಿ ಬಳ್ಳಾರಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಮತದಾರರ ನೋಂದಣಾಧಿಕಾರಿ ಆಗಿರುವ ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ., ಸಹಾಯಕ ಮತದಾರರ ನೋಂದಣಾಧಿಕಾರಿ ಆದ ತಹಶೀಲ್ದಾರ ಎಲ್ಲಾ ನೋಡಲ್ ಅಧಿಕಾರಿಗಳು ಉಪಸ್ಥಿತರಿದ್ದರು.

ಜಿಲ್ಲಾ ಕೇಂದ್ರದಲ್ಲಿ 21 ರಂದು ಅಂತರಾಷ್ಟ್ರೀಯ ಯೋಗ ದಿನಾಚರಣೆ

ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್ ಕರೆ

ಬಳ್ಳಾರಿ,ಜೂ.12-

ಜಿಲ್ಲಾ ಕೇಂದ್ರದಲ್ಲಿ ಜೂನ್ 21 ರಂದು ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಲು ಬೇಕಾದ ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್ ಅವರು ಸೂಚಿಸಿದರು.

ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಿದ್ದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜೂ.21 ರಂದು ನಗರದ ಶೆಟ್ರ ಗುರುಶಾಂತಪ್ಪ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ ನಡೆಸಲು ನಿರ್ಧರಿಸಲಾಗಿದ್ದು, ಅರ್ಥಪೂರ್ಣವಾಗಿ ಆಚರಿಸುವ ನಿಟ್ಟಿನಲ್ಲಿ ಪೂರಕ ಜವಾಬ್ದಾರಿಗಳನ್ನು ವಹಿಸಿಕೊಂಡು ಸಮರ್ಪಕವಾಗಿ ನಿರ್ವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅಂದು ಬೆಳಿಗ್ಗೆ 07 ರಿಂದ ಯೋಗ ಕಾರ್ಯಕ್ರಮ ಜರುಗಲಿದ್ದು, ಯೋಗಾಸನ ಮಾಡಲು ನಿರ್ದೇಶನ ಮಾಡಲಾಗುವುದು. ಜಿಲ್ಲಾ ಮಟ್ಟದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಹೆಚ್ಚಿನ ಜನ ಆಗಮಿಸಬಹುದಾಗಿದೆ. ಪತಂಜಲಿ ಯೋಗ ಕೇಂದ್ರ, ಆರ್ಟ್ ಆಫ್ ಲಿವಿಂಗ್ ಸೇರಿದಂತೆ ಯೋಗ ಕೇಂದ್ರಗಳು ಅಗತ್ಯವಾಗಿ ಸಹಕಾರ ನೀಡಬೇಕು ಎಂದರು.

ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಹಾಸ್ಟೆಲ್‌ಗಳಲ್ಲಿರುವ ವಿದ್ಯಾರ್ಥಿಗಳು ಯೋಗಾಸನ ಕಾರ್ಯಕ್ರಮದಲ್ಲಿ ಭಾಗವಹಿಸಲು ಕ್ರಮವಹಿಸುವಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಸಮಾಜಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಆಗಮಿಸುವವರಿಗೆ ಲಘು ಉಪಹಾರ ಮತ್ತು ನೀರಿನ ವ್ಯವಸ್ಥೆ, ಯೋಗಾಸನ ಮಾಡಲು ಗ್ರೀನ್ ಮ್ಯಾಟ್ ವ್ಯವಸ್ಥೆ ಮತ್ತು ವೇದಿಕೆ ಹಾಗೂ ಧ್ವನಿವರ್ಧಕ ವ್ಯವಸ್ಥೆ ಮಾಡಿಕೊಳ್ಳಬೇಕು. ಆವರಣದೊಳಗೆ ಸಂಪೂರ್ಣ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಪಾಲಿಕೆ ಅಧಿಕಾರಿಗಳು ಕ್ರಮ ವಹಿಸಬೇಕು ಎಂದರು.

ಆಹ್ವಾನ ಪತ್ರಿಕೆ ಮುದ್ರಿಸಿ ಗಣ್ಯರನ್ನು ಆಹ್ವಾನಿಸಬೇಕು. ಕಾರ್ಯಕ್ರಮದಲ್ಲಿ ನುರಿತ ಯೋಗ ಶಿಕ್ಷಕರನ್ನು ನಿಯೋಜಿಸಬೇಕು. ಆರೋಗ್ಯ ಇಲಾಖೆಯಿಂದ ಅಗತ್ಯ ಚಿಕಿತ್ಸಾ ವ್ಯವಸ್ಥೆ ಸೇರಿದಂತೆ ಇನ್ನಿತರ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಹಾಗೂ ಪಾರ್ಕಿಂಗ್ ವ್ಯವಸ್ಥೆ ನೋಡಿಕೊಳ್ಳಲು ಪೊಲೀಸ್ ಬಂದೋಬಸ್ತ್ ಒದಗಿಸಬೇಕು. ಒಟ್ಟಾರೆ ಕಾರ್ಯಕ್ರಮ ಶಿಸ್ತುಬದ್ಧವಾಗಿ ಯಾವುದೇ ಲೋಪ ಆಗದಂತೆ ನೋಡಿಕೊಳ್ಳಬೇಕು ಎಂದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ಫಣೇಂದರ್ ಅವರು ಮಾತನಾಡಿ, ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಈ ಬಾರಿ ಆರೋಗ್ಯಕರ

ವೃದ್ಧಾಪ್ಯಕ್ಕಾಗಿ ಯೋಗ ಎಂಬ ಘೋಷವಾಕ್ಯದೊಂದಿಗೆ ಆಚರಣೆ ಮಾಡಲಾಗುತ್ತಿದೆ. ಕಾರ್ಯಕ್ರಮದ ಅಂಗವಾಗಿ ಜೂನ್ 19 ರಂದು ಯೋಗಾಜಾಥಾ ಹಮ್ಮಿಕೊಳ್ಳಲಾಗುವುದು ಎಂದು ಸಭೆಯಲ್ಲಿ ಮಾಹಿತಿ ನೀಡಿದರು.


ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಉಪ-ಆಯುಕ್ತ ನಂದೀಶ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಚಿದಾನಂದಪ್ಪ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಜಲಾಲಪ್ಪ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಜಿಲ್ಲೆಯ ವಿವಿಧ ಯೋಗ ಕೇಂದ್ರದ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಎಸ್ಸಿ ಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಮೊಬೈಲ್ ಕ್ಯಾಂಟೀನ್: ಫಲಾನುಭವಿಗಳ ಆಯ್ಕೆ ಪಾರದರ್ಶಕವಾಗಿರಲಿ-ಡಿಸಿ

ವಿಜಯನಗರ ,ಜೂ.12-

ಸರ್ಕಾರದ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ಸಕಾಲದಲ್ಲಿದೊರೆಯುವು ದರಜತೆಗೆ ಫಲಾನುಭವಿಗಳ ಆಯ್ಕೆ ಪಾರದರ್ಶಕವಾಗಿರಬೇಕು ಎಂದು ಜಿಲ್ಲಾಧಿಕಾರಿ ಕವಿತಾ.ಎಸ್ ಮನ್ನಿಕೇರಿ ಅವರು ಅಧಿಕಾರಿಗಳಿಗೆ ನಿರ್ದೇಶಿಸಿದರು. ಪ್ರಕ್ರಿಯೆ

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಗುರುವಾರ ಎಸ್.ಸಿ.ಎಸ್.ಪಿ ಹಾಗೂ ಟಿ.ಎಸ್.ಪಿ ಯೋಜನೆಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯೋಜನೆಯ ಅನುಷ್ಠಾನ ಹಾಗೂ ಫಲಾನುಭವಿಗಳ ಆಯ್ಕೆ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದಯುವಕರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಪ್ರವಾಸೋದ್ಯಮ ಇಲಾಖೆಯ ಈ ಯೋಜನೆ ಅತ್ಯಂತ ಸಹಕಾರಿಯಾಗಿದೆ. ಅಧಿಕಾರಿಗಳು ಯಾವುದೇ ವಿಳಂಬ ಮಾಡದೇ ಅರ್ಹ ಫಲಾನುಭವಿಗಳಿಗೆ ಮೊಬೈಲ್ ಕ್ಯಾಂಟಿನ್ ವಾಹನಗಳ ಸೌಲಭ್ಯನೀಡಬೇಕು ಎಂದುಜಿಲ್ಲಾಧಿಕಾರಿ ಕವಿತಾಎಸ್ ಮನ್ನಿಕೇರಿ ಹೇಳಿದರು.

ವಿಶ್ವವಿಖ್ಯಾತ ಹಂಪಿ ಸೇರಿದಂತೆಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಪೂರಕವಾಗಿಯೋಜನೆ ಅನುಷ್ಠಾನವಾಗಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳ ಆರ್ಥಿಕ ಸಬಲೀಕರಣಕ್ಕಾಗಿ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಹಮ್ಮಿಕೊಂಡಿರುವ 'ಮೊಬೈಲ್ ಕ್ಯಾಂಟೀನ್' ಯಾವುದೇ ಲೋಪದೋಷಗಳಿಲ್ಲದೆ ಪಾರದರ್ಶಕವಾಗಿ ಅರ್ಹ ಫಲಾನುಭವಿಗಳಿಗೆ ಸೌಲಭ್ಯ ಒದಗಿಸಬೇಕುಎಂದು ಹೇಳಿದರು.

ಹಂಪಿ ಸೇರಿದಂತೆಆಯಕಟ್ಟಿನ ಪ್ರದೇಶಗಳಲ್ಲಿ ಅಥವಾ ಜಿಲ್ಲೆಗೆ ಬರುವ ದೇಶ-ವಿದೇಶಿ ಪ್ರವಾಸಿಗರ ಗಮನದಲ್ಲಿಟ್ಟುಕೊಂಡು, ವಿಶ್ವ ಪಾರಂಪರಿಕತಾಣ ಹಂಪಿ, ಕಮಲಾಪುರ, ಹೊಸಪೇಟೆ ನಗರದ ಪ್ರಮುಖ ವೃತ್ತಗಳು ಹಾಗೂ ಪ್ರವಾಸಿಗರು ಹೆಚ್ಚಾಗಿ ಸಂಚರಿಸುವ ಹೆದ್ದಾರಿಯ ಆಯಕಟ್ಟಿನ ಜಾಗಗಳಲ್ಲಿ ಈ ಸಂಚಾರಿ ಕ್ಯಾಂಟೀನ್ ನಡೆಸಲು ಅವಕಾಶ ಕಲ್ಪಿಸಿ ಕೊಡಬೇಕು.ಇಲಾಖೆಯಿಂದ ಸಿಗುವ ಗರಿಷ್ಠ ಸಹಾಯಧನ ಮೊತ್ತ ಹಾಗೂ ಬ್ಯಾಂಕ್‌ಗಳ ಮೂಲಕ ಒದಗಿಸಲಾಗುವ ಸಾಲ ಸೌಲಭ್ಯ ಸಕಾಲಕ್ಕೆ ಸಿಗುವಂತೆ ಲೀಡ್ ಬ್ಯಾಂಕ್ ಅಧಿಕಾರಿಗಳೊಂದಿಗೆ ಸಮನ್ವಯತೆ ಸಾಧಿಸುವ ಮೂಲಕ ಕಾರ್ಯನಿರ್ವಹಿಸಬೇಕು ಎಂದರು.

ಪ್ರವಾಸಿ ತಾಣ ವ್ಯಾಪ್ತಿಯಲ್ಲಿ ಸ್ವಚ್ಛತೆ ಮತ್ತು ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಬೇಕು. ಮೊಬೈಲ್ ಕ್ಯಾಂಟೀನ್ ವಿತರಿಸುವುದಷ್ಟೇ ಮುಖ್ಯವಲ್ಲ, ಪ್ರವಾಸಿ ತಾಣಗಳ ಸ್ವಚ್ಛತೆ ಕಾಪಾಡುವುದುಅಷ್ಟೇ ಮುಖ್ಯ ಎಂದು ಹೇಳಿದರು. ಕ್ಯಾಂಟೀನ್‌ಗಳಲ್ಲಿ ಸಂಪೂರ್ಣ ಪ್ಲಾಸ್ಟಿಕ್ ನಿಷೇಧ: ಕಸ ವಿಲೇವಾರಿಗೆ ಜೈವಿಕವಾಗಿ ಕೊಳೆಯುವ ವಸ್ತುಗಳ ಬಳಸಬೇಕು ಮತ್ತುತ್ಯಾಜ್ಯ ವಿಲೇವಾರಿಗೆ ಕಸದಡಬ್ಬಿ ಬಳಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು. ಹಂಪಿಯರಕ್ಷಿತ ಮತ್ತು ಬಫರ್ ವಲಯದಐತಿಹಾಸಿಕ ಸ್ಮಾರಕಗಳ ಸೌಂದರ್ಯಕ್ಕೆಧಕ್ಕೆ ಬಾರದಂತೆ ಮಾಡಬೇಕು ಎಂದು ಅವರುಎಚ್ಚರಿಸಿದರು. ನಿಯಮಪಾಲಿನ ಈ ಯೋಜನೆಯ ಮೂಲಕ ಪ್ರವಾಸಿಗರಿಗೆ ಶುಚಿ-ರುಚಿಯಾದ ಸ್ಥಳೀಯ ಮತ್ತು ಸಾಂಪ್ರದಾಯಿಕಆಹಾರ ಪದಾರ್ಥಗಳು ಕೈಗೆಟುಕುವದರದಲ್ಲಿ ಸಿಗುವಂತಾಗಬೇಕು.ಇದು ಕೇವಲ ಒಂದು ಸಮುದಾಯದ ಆರ್ಥಿಕ ಪ್ರಗತಿಯಷ್ಟೇ ಅಲ್ಲದೆ, ಜಿಲ್ಲೆಯ ಪ್ರವಾಸೋದ್ಯಮ ಮೂಲಸೌಕರ್ಯ ವೃದ್ಧಿಗೂ ಪೂರಕವಾಗಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ಈ ವೇಳೆ ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಪ್ರಭುಲಿಂಗ ತಳಕೇರಿ ಮಾತನಾಡಿ, 2024-25ನೇ ಸಾಲಿಗೆ ಈ ಯೋಜನೆಯಡಿ, ಪರಿಶಿಷ್ಟ ಜಾತಿಗೆ 6 ಮತ್ತುಪರಿಶಿಷ್ಟ ಪಂಗಡಕ್ಕೆ 4 ಸೇರಿಒಟ್ಟು 10 ಜನ ಫಲಾನುಭವಿಗಳಿಗೆ ನೀಡುವಗುರಿ ಹೊಂದಲಾಗಿದೆ.ಈ ಪೈಕಿ 4 ಫಲಾನುಭವಿಗಳ ಅರ್ಜಿ ಅನುಮೋದನೆ ಗೊಂಡು ಸಹಾಯಧನ ಮಂಜೂರು ಮಾಡಲಾಗಿದೆ.ಅರ್ಹ ಫಲಾನುಭವಿಗಳಿಗೆ ಶೀಘ್ರದಲ್ಲೇ ವಾಹನ ವಿತರಣೆ ಮಾಡಲಾಗುವುದು. ಉಳಿದ 6 ಫಲಾನುಭವಿಗಳ ಆಯ್ಕೆಗಾಗಿ ಮುಂದಿನ ದಿನಗಳಲ್ಲಿ ಅರ್ಜಿಆಹ್ವಾನಿಸಲಾಗುವುದು.

2025-26ನೇ ಸಾಲಿಗಾಗಿ ಪರಿಶಿಷ್ಟ ಜಾತಿಗೆ 6 ಮತ್ತು ಪರಿಶಿಷ್ಟ ಪಂಗಡಗಕ್ಕೆ 4 ಸೇರಿಒಟ್ಟು 10ಜನ ಫಲಾನುಭವಿಗಳನ್ನು ಆಯ್ಕೆ ಮಾಡಲುಗುರಿ ನಿಗದಿಪಡಿಸಲಾಗಿದೆ. ಅದಕ್ಕಾಗಿ ಪರಿಶಿಷ್ಟ ಜಾತಿ ಸಮುದಾಯದಿಂದ 25 ಹಾಗೂ ಪರಿಶಿಷ್ಟ ಪಂಗಡ ಫಲಾನುಭವಿಗಳಿಂದ 4 ಸೇರಿಒಟ್ಟು 29 ಅಭ್ಯರ್ಥಿಗಳಿಂದ ಅರ್ಜಿ ಸ್ವೀಕೃತವಾಗಿದೆ. ಫಲಾನುಭವಿಗಳ ಆಯ್ಕೆಯಲ್ಲಿ ಶೇ.33 ರಷ್ಟು ಮಹಿಳೆಯರಿಗೆ ಮೀಸಲಾತಿ ಹಾಗೂ ಫಲಾನುಭವಿಗಳ ವಯಸ್ಸು ಮತ್ತುಎಸ್‌ಎಸ್‌ಎಲ್ ಸಿ ಯಲ್ಲಿ ಪಡೆದ ಅಂಕ ಮತ್ತು ವಯೋಮಿತಿಆಧಾರದ ಮೇಲೆ ಆಯ್ಕೆ ಮಾಡಲಾಗುವುದುಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿರವಿ ಕುಮಾರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



ಜಮಖಂಡಿಯಲ್ಲಿ ಜನಸಂಪರ್ಕ ಸಭೆ : 13 ಅರ್ಜಿಗಳ ಸ್ವೀಕಾರ

ಬಾಗಲಕೋಟೆ, ಜೂ.12-

ಜಮಖಂಡಿ ತಹಶೀಲ್ದಾರ ಕಾರ್ಯಾಲಯದಲ್ಲಿ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಎಂ.ಬಿ.ನಂದಗಾವಿ ಅವರ ನೇತೃತ್ವದಲ್ಲಿ ಬುಧವಾರ ನಡೆದ ಜನಸಂಪರ್ಕ ಸಭೆಯಲ್ಲಿ ಸಾರ್ವಜನಿಕರಿಂದ 13 ಅರ್ಜಿಗಳು ಸ್ವೀಕರಿಸಲಾಯಿತು. ಜನಸಂಪರ್ಕ ಸಭೆಯಲ್ಲಿ ಜಮಖಂಡಿ ತಾಲೂಕಾ ಮಟ್ಟದ ವಿವಿಧ ಇಲಾಖೆಯ 40 ಜನ ಅಧಿಕಾರಿಗಳು ಸೇರಿದಂತೆ ಲೋಕಾಯುಕ್ತ ಠಾಣೆಯ ಪೊಲೀಸ್ ಉಪಾಧೀಕ್ಷಕ ಸುರೇಶರೆಡ್ಡಿ ಎಂ.ಎಸ್, ಪೊಲೀಸ್ ನಿರೀಕ್ಷಕರಾದ ಎಂ.ಬಿ.ಬಿರಾದಾರ, ಎನ್.ಆರ್.ಖಿಲಾರೆ ಹಾಜರಿದ್ದು, ಬಂದ ದೂರು ಅರ್ಜಿಗಳನ್ನು ಕೂಡಲೇ ಇತ್ಯರ್ಥಪಡಿಸಿ ಹಿಂಬರಹ ಇಲ್ಲವೇ ಮಾಹಿತಿ ನೀಡುವಂತೆ ಸಭೆಯಲ್ಲಿ ಸೂಚಿಸಲಾಯಿತು.

ಇಲಾಖೆಯ ಅಧಿಕಾರಿಗಳ ಕಾರ್ಯವೈಖರಿಗಳ ಬಗ್ಗೆ ವಿಚಾರಿಸಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಧ್ಯತೆಯ ಮೇಲೆ ನಿಯಮಾನುಸಾರ ಕ್ರಮ ಜರುಗಿಸಲು ಮತ್ತು ಸಾರ್ವಜನಿಕ ಸಲ್ಲಿಸಿದ ಅರ್ಜಿಗಳನ್ನು ಸ್ವೀಕೃತಿ ವಿಭಾಗದಲ್ಲಿ ಸ್ವೀಕರಿಸಿ ಸಂಬಂಧಿಸಿದವರಿಗೆ ಸ್ವೀಕೃತಿ ನೀಡಲು ಹಾಗೂ ಸದರಿ ವಿಷಯಗಳನ್ನು ವಿನಾಕಾರಣ ಬಾಕಿ ಇಟ್ಟುಕೊಳ್ಳದೇ ನಿಯಮಾನುಸಾರ ಕ್ರಮ ಜರುಗಿಸಲು ತಿಳಿಸಲಾಯಿತು.

ಒಂದು ವೇಳೆ ತಮ್ಮ ಅಧಿಕಾರ ವ್ಯಾಪ್ತಿಗೆ ಒಳಪಡದಿದ್ದಲ್ಲಿ ಸೂಕ್ತ ಮಾಹಿತಿಯೊಂದಿಗೆ ಕೂಡಲೇ ಹಿಂಬರಹ ನೀಡಲು ಸೂಚಿಸಲಾಯಿತು. ಶಾಲೆ, ಕಾಲೇಜು ಹಾಗೂ ವಸತಿ ನಿಲಯಗಳ ಆವರಣದಲ್ಲಿ ಮತ್ತು ಅಕ್ಕ-ಪಕ್ಕದಲ್ಲಿ ಅಪಾಯಕಾರಿ ರೀತಿಯಲ್ಲಿರುವ ವಿದ್ಯುತ್ ಕಂಭ ಪರಿವರ್ತಕ ಹಾಗೂ ಇತರೆ ಇಲೆಕ್ಟ್ರಿಕ್ ಸಾಧನಗಳನ್ನು ತುರ್ತಾಗಿ ಸ್ಥಳಾಂತರ ಮಾಡಲು ಹಾಜರಿದ್ದ ಹೆಸ್ಕಾಂ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಆಶೀರ್ವಾದ ಪ್ರೌಢಶಾಲೆಯಲ್ಲಿ ಮಕ್ಕಳ ಕಲಾ ಸ್ಪರ್ಧೆ

ರಾಷ್ಟ್ರೀಯ ಶಸ್ತ್ರಚಿಕಿತ್ಸಕರ ವಾರಾಚರಣೆ ಅಂಗವಾಗಿ ಜಾಗೃತಿ ಕಾರ್ಯಕ್ರಮ



ಬಳ್ಳಾರಿ,ಜೂ.12-

ರಾಷ್ಟ್ರೀಯ ಶಸ್ತ್ರಚಿಕಿತ್ಸಕರ ವಾರಾಚರಣೆಯ ಅಂಗವಾಗಿ ನಗರದ ಆಶೀರ್ವಾದ ಹೈಸ್ಕೂಲ್‌ನಲ್ಲಿ ಕೆಎಸ್‌ಸಿಎಎಸ್‌ಐ -ಬಳ್ಳಾರಿ ಶಾಖೆ ವತಿಯಿಂದ ಶಾಲಾ ವಿದ್ಯಾರ್ಥಿಗಳಿಗಾಗಿ 'ಮಕ್ಕಳ ಕಲಾ ಸ್ಪರ್ಧೆ' ಆಯೋಜಿಸಲಾಗಿತ್ತು.

ಶಾಲಾ ಮಕ್ಕಳಲ್ಲಿ ಸೃಜನಾತ್ಮಕತೆಯನ್ನು ಉತ್ತೇಜಿಸುವುದು ಮತ್ತು ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು ಈ ಸ್ಪರ್ಧೆಯ ಮುಖ್ಯ ಉದ್ದೇಶವಾಗಿತ್ತು. ವಿದ್ಯಾರ್ಥಿಗಳು ಅತ್ಯಂತ ಹರ್ಷಭರಿತರಾಗಿ ಭಾಗವಹಿಸಿದ್ದ ಈ ಚಿತ್ರಕಲೆ ಸ್ಪರ್ಧೆಯನ್ನು ಎರಡು ಪ್ರತ್ಯೇಕ ವಿಭಾಗಗಳಲ್ಲಿ ನಡೆಸಲಾಯಿತು.

1ನೇ ವಿಭಾಗದಲ್ಲಿ 1ನೇ ತರಗತಿಯಿಂದ 5ನೇ ತರಗತಿಯ ವಿದ್ಯಾರ್ಥಿಗ'ಳಿಗೆ, 2ನೇ ವಿಭಾಗದಲ್ಲಿ 6ನೇ ತರಗತಿಯಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿತ್ತು.

ಎರಡೂ ವಿಭಾಗಗಳ ವಿದ್ಯಾರ್ಥಿ ಗಳಿಗೆ ಪ್ರತ್ಯೇಕ ವಿಷಯಗಳನ್ನು ನೀಡಲಾಗಿದ್ದು, ಅವರು ತಮ್ಮ ಕಲ್ಪನಾ ಶಕ್ತಿಯ ಮುಖಾಂತರ ಪ್ರಾಯೋಗಿಕವಾಗಿ ಆರೋಗ್ಯದ ಮಹತ್ವವನ್ನು ಚಿತ್ರಗಳಲ್ಲಿ ಅಭಿವ್ಯಕ್ತಪಡಿಸಲು ಮುಕ್ತ ಅವಕಾಶ ಕಲ್ಪಿಸಲಾಗಿತ್ತು.

ಸ್ಪರ್ಧೆಯಲ್ಲಿ ಭಾಗವಹಿಸಿದ ಮಕ್ಕಳು ಬಣ್ಣ ಬಣ್ಣದ ಹಾಗೂ ಅರ್ಥಪೂರ್ಣ ಚಿತ್ರಗಳ ಮೂಲಕ ತಮ್ಮ ಅಪಾರ ಸೃಜನಶೀಲತೆ, ಕಲ್ಪನಾ ಸಾಮರ್ಥ್ಯ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ತಮಗಿರುವ ಅರಿವನ್ನು ಪ್ರದರ್ಶಿಸಿದರು. ವಿದ್ಯಾರ್ಥಿಗಳ ಈ ಸಕ್ರಿಯ ಭಾಗವಹಿಸುವಿಕೆ ಮತ್ತು ಉತ್ಸಾಹವನ್ನು ಶಾಲೆಯ ಶಿಕ್ಷಕರು ಹಾಗೂ ಕಾರ್ಯಕ್ರಮದ ಆಯೋಜಕರು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ



ಕೆಎಸ್‌ಸಿಎಎಸ್‌ಐ ಬಳ್ಳಾರಿ ಶಾಖೆಯ ಅಧ್ಯಕ್ಷ ಡಾ. ಶೇಖಪ್ಪ ಮಾಳಗಿಮನಿ, ಕಾರ್ಯದರ್ಶಿ ಡಾ. ಗುಡೇಕೋಟೆ ರವಿಕುಮಾರ್, ಸಹಕಾರ್ಯದರ್ಶಿ ಡಾ. ಶೈಕ್ ಫರ್ಹಾನ್ ಎಂ.ಬಿ ಸೇರಿದಂತೆ ಜನರಲ್ ಸರ್ಜರಿ ವಿಭಾಗದ ವಿದ್ಯಾರ್ಥಿಗಳು, ವೈದ್ಯಕೀಯ ಸಿಬ್ಬಂದಿ, ಶಾಲೆಯ ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಲೆಯ ಮೂಲಕ ಆರೋಗ್ಯ ಜಾಗೃತಿಯನ್ನು ಮೂಡಿಸುವಲ್ಲಿ ಈ ವೇದಿಕೆಯು ಅತ್ಯಂತ ಪರಿಣಾಮಕಾರಿಯಾಗಿ ಮೂಡಿಬಂದಿತು.

ಮುಖ್ಯಮಂತ್ರಿಗಳಿಂದ ಜೂನ್ 13ಕ್ಕೆ ಸಭೆ ನಿಗದಿ

ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಡಿಸಿ ಡಾ.ಸುರೇಶ ಬಿ.ಇಟ್ನಾಳ

ಕೊಪ್ಪಳ ಜೂ.12-

ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಎಲ್ಲ ಜಿಲ್ಲೆಯ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ಜೂನ್ 13 ರಂದು ಪ್ರಗತಿ ಪರಿಶೀಲನಾ ಸಭೆ ನಡೆಸಲಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳಿಂದ ಮಾಹಿತಿ ಪಡೆಯಲು ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಅವರು ಜೂನ್ 11ರಂದು ಸಭೆ ನಡೆಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿದ ಜಿಲ್ಲಾಧಿಕಾರಿಗಳು, ಮುಂಗಾರು ಆರಂಭ ಹಿನ್ನೆಲೆ ಜಿಲ್ಲೆಯಲ್ಲಿ ಬಿತ್ತನೆ ಪ್ರಮಾಣ, ರಸಗೊಬ್ಬರ ವಿತರಣೆ ಸೇರಿದಂತೆ ನಾನಾ ವಿಷಯಗಳ ಬಗ್ಗೆ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಮಾಹಿತಿ ಪಡೆದುಕೊಂಡರು.

ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯ ರೈತರಿಂದ ಬಿತ್ತನೆ ಕಾರ್ಯ ಚುರುಕುಗೊಂಡಿದ್ದು, ಕೃಷಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ರೈತರಿಗೆ ಸ್ಪಂದನೆ ನೀಡಬೇಕು ಎಂದು ತಿಳಿಸಿದ ಜಿಲ್ಲಾಧಿಕಾರಿಗಳು, ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳು ಸಹ ತಮ್ಮ ತಮ್ಮ ಇಲಾಖೆಯ ಪ್ರಗತಿಯ ಬಗ್ಗೆ ಮಾಹಿತಿ ನೀಡಬೇಕು. 2026-27ನೇ ಸಾಲಿನ ಮೊದಲ ತ್ರೈಮಾಸಿಕ ಅವಧಿ ಮುಕ್ತಾಯದ ಹಂತಕ್ಕೆ ಬಂದಿದ್ದು ಆಯಾ ಇಲಾಖೆಗಳ ಅಧಿಕಾರಿಗಳು ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಹೆಚ್ಚಿನ ಗಮನ



ಕೊಡಬೇಕು ಎಂದು ಸೂಚನೆ ನೀಡಿದರು.

ಮುಂಗಾರು ಹಂಗಾಮಿನಲ್ಲಿ ರೈತರ ಬೇಡಿಕೆ ಹಾಗೂ ಅಗತ್ಯಕ್ಕೆ ತಕ್ಕಂತೆ ಬಿತ್ತನೆ ಬೀಜ ಮತ್ತು ರಸಗೊಬ್ಬರವನ್ನು ದಾಸ್ತಾನೀಕರಿಸಿ, ನಿಯಮಾನುಸಾರ ವಿತರಿಸಿ. ಬಿತ್ತನೆ ಬೀಜ ಹಾಗೂ ರಸಗೊಬ್ಬರ ಮಾರಾಟಗಾರರಿಗೆ ನಿಯಮ ಪಾಲನೆ ಕಡ್ಡಾಯಗೊಳಿಸಿ. ಹೆಚ್ಚಿನ ದರ ಅಥವಾ ಕಳಪೆ ಬೀಜ, ರಸಗೊಬ್ಬರ ಮಾರಾಟ ಮಾಡದಂತೆ ಎಚ್ಚರ ವಹಿಸಿ. ಮಳೆಯಿಂದ ಆಗಬಹುದಾದ ಅವಘಡಗಳ ಬಗ್ಗೆ ಎಚ್ಚರ ವಹಿಸಿ. ಅಂಗನವಾಡಿ, ಶಾಲಾ ಕಾಲೇಜು ಕಟ್ಟಡಗಳನ್ನು ಪರಿಶೀಲಿಸಿ ಅಗತ್ಯವಿದ್ದಲ್ಲಿ ದುರಸ್ತಿಗೊಳಿಸಿ. ಅವಘಡ ಸಂದರ್ಭದಲ್ಲಿ ಅಗತ್ಯ ಪರಿಹಾರ ಕ್ರಮ ಕೈಗೊಳ್ಳಲು ಸನ್ನದ್ಧರಾಗಿರಿ ಎಂದು ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ಅವರು ಸೂಚಿಸಿದರು.

ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ ಅವರು ಮಾತನಾಡಿ, ಈಗಾಗಲೇ ಶಾಲೆಗಳು ಆರಂಭವಾಗಿದ್ದು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ವಿತರಣೆ, ಬಟ್ಟೆ ಮತ್ತು ಶೂ ಸಾಕ್ಸ್ ವಿತರಣೆಯನ್ನು ಕಾಲಮಿತಿಯೊಳಗೆ ನಿರ್ವಹಣೆ ಮಾಡಲು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಜಿಲ್ಲೆಯಲ್ಲಿ ಈಗಿರುವ ಒಟ್ಟು ವಸತಿ ನಿಲಯಗಳೆಷ್ಟು? ವಿದ್ಯಾರ್ಥಿಗಳ ಸಂಖ್ಯೆ? ಸ್ವಂತ ಕಟ್ಟಡ ಅಥವಾ ಬಾಡಿಗೆ ಕಟ್ಟಡ, ವಸತಿ ನಿಲಯಕ್ಕೆ ನಿವೇಶನದ ಬೇಡಿಕೆಗಳ ಬಗ್ಗೆ ಸಮರ್ಪಕ ಮಾಹಿತಿ ನೀಡಲು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಮತ್ತ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಂಟಿ ಕೃಷಿ ನಿರ್ದೇಶಕರಾದ ಜೆ.ಡಿ ಕೃಷ್ಣಮೂರ್ತಿ ಮಾತನಾಡಿ, ಈ ವರ್ಷ 10 ಜೂನ್ 2026 ರವರೆಗೆ ಜಿಲ್ಲೆಯ ವಾಡಿಕೆ ಮಳೆ 112 ಮಿ.ಮೀ. ಇದ್ದು, ವಾಸ್ತವಿಕವಾಗಿ 159 ಮಿ.ಮೀ. ಮಳೆಯಾಗಿದೆ. ಇದರಿಂದ ಜಿಲ್ಲೆಯಲ್ಲಿ ಶೇ.41 ರಷ್ಟು ಅಧಿಕ ಮಳೆಯಾಗಿದ್ದು, ಜಿಲ್ಲೆಯ ಎಲ್ಲಾ 7 ತಾಲೂಕುಗಳಲ್ಲಿ ಉತ್ತಮ ಹಸಿ ಮಳೆಯಾಗಿದೆ. ಜಿಲ್ಲೆಯ ಒಟ್ಟು ಬೆಳೆ ವಿಸ್ತೀರ್ಣ ಗುರಿ 3.49 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ, ಈಗಾಗಲೇ 1.32 ಹೆಕ್ಟರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದು, ಬಿತ್ತನೆ ಕಾರ್ಯವು ಚುರುಕುಗೊಂಡಿರುತ್ತದೆ. ಈ ವರ್ಷ ಜಿಲ್ಲೆಯಲ್ಲಿ ಹೆಚ್ಚಿನ ಮಳೆಯ ಹಿನ್ನೆಲೆ ರೈತರು ಸುಮಾರು 1.22 ಲಕ್ಷ ಹೆಕ್ಟೇರ್ ಮೆಕ್ಕೆಜೋಳ, 0.32 ಲಕ್ಷ ಹೆಕ್ಟೇರ್ ಸಜ್ಜೆ, 0.44 ಲಕ್ಷ ಹೆಕ್ಟೇರ್ ಹೆಸರು ಬೆಳೆ ಹಾಗೂ 0.40 ಲಕ್ಷ ಹೆಕ್ಟೇರ್ ತೊಗರಿ ಬಿತ್ತನೆಗೆ ರೈತರು ಮುಂದಾಗಿರುತ್ತಾರೆ. ಜಿಲ್ಲೆಯ ಮುಂಗಾರು ಹಂಗಾಮಿನ ಒಟ್ಟು ರಸಗೊಬ್ಬರ ಬೇಡಿಕೆಯು 1,17,703 ಮೆಟ್ರಿಕ್ ಟನ್ ಆಗಿದ್ದು, ಹಂಗಾಮಿನ ಆರಂಭದಲ್ಲಿ 26,440 ಮೆಟ್ರಿಕ್ ಟನ್ ಆರಂಭಿಕ ಶಿಲ್ಕು ಲಭ್ಯವಿದ್ದು, ಇದುವರೆಗೆ 22,490 ಮೆಟ್ರಿಕ್ ಟನ್ ರಸಗೊಬ್ಬರ ಪೂರೈಕೆಯಾಗಿದೆ. ಹೀಗಾಗಿ ಒಟ್ಟು ಲಭ್ಯತೆ 48,930 ಮೆಟ್ರಿಕ್ ಟನ್ ಆಗಿದ್ದು, ಇದರಲ್ಲಿ 25,978 ಮೆಟ್ರಿಕ್ ಟನ್ ರಸಗೊಬ್ಬರ ವಿತರಣೆಗೊಂಡಿರುತ್ತದೆ. ಪ್ರಸ್ತುತ ಜಿಲ್ಲೆಯ ವಿವಿಧ ಮಾರಾಟ ಕೇಂದ್ರಗಳಲ್ಲಿ 22,952 ಮೆಟ್ರಿಕ್ ಟನ್ ರಸಗೊಬ್ಬರ ಲಭ್ಯವಿದ್ದು, ಮುಂಬರುವ ದಿನಗಳಲ್ಲಿ ರಸಗೊಬ್ಬರಗಳನ್ನು ಸಮರ್ಪಕವಾಗಿ ವಿತರಣೆ ಮಾಡಲು ಇಲಾಖೆ ಕ್ರಮ ಕೈಗೊಂಡಿದೆ. ಯೂರಿಯಾ 8,186 ಮೆಟ್ರಿಕ್ ಟನ್, ಡಿ ಎ ಪಿ 2,571 ಮೆಟ್ರಿಕ್ ಟನ್, ಎಂ ಓ ಪಿ 1,207 ಮೆಟ್ರಿಕ್ ಟನ್, ಕಾಂಪ್ಲೆಕ್ಸ್ 10,422 ಮೆಟ್ರಿಕ್ ಟನ್ ಹಾಗೂ ಎಸ್ ಎಸ್ ಪಿ 566 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಇದೆ ಎಂದು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಡಿಎಫ್‌ಓ ನಿರ್ಮಲಾ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಜಿಲ್ಲಾ ಪಂಚಾಯತಿ ಉಪಕಾರ್ಯದರ್ಶಿ ಕೃಷ್ಣಮೂರ್ತಿ ಟಿ., ನಗಾರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಮಂಜುನಾಥ ಗುಂಡೂರ, ಜಂಟಿ ತೋಟಗಾರಿಕೆ ನಿರ್ದೇಶಕ ಕೃಷ್ಣ ಉಕ್ಕುಂದ, ಡಿಡಿಪಿಐ ಸೋಮಶೇಖರಗೌಡ ಪಾಟೀಲ್, ಡಿಡಿಪಿಯು ಜಗದೀಶ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ವೈದ್ಯಕೀಯ ವಿದ್ಯಾರ್ಥಿಗಳಿಗೆ ಹೊಸದಾಗಿ ಶುಲ್ಕ ಹೆಚ್ಚಳ ಇಲ್ಲ

ಎಎಂಪಿಸಿಕೆ ಖಾಸಗಿ ಕೋಟಾ - 7,32,625 ರೂ. ಬೇರೆ ರಾಜ್ಯಗಳ ವೈದ್ಯಕೀಯ ಶಿಕ್ಷಣ ಸಚಿವರ ಜೊತೆ ಸಭೆ:

ಡೀಮ್ಡ್ ವಿವಿ ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಯುಜಿಸಿ ಅಡಿ ಬರುತ್ತಾರೆ. ಎಂಸಿಸಿ ಮೂಲಕ ನೇರ ಕೌನ್ಸೆ ಲಿಂಗ್ ಮಾಡುತ್ತಾರೆ. ಈ ಸಂಬಂಧ ಕೇಂದ್ರ ಸರ್ಕಾರ ಯನಿಫಾರ್ಮ್ ಕಾನೂನು ತರಬೇಕು. ಶುಲ್ಕ ಹೇಗಿರಬೇಕು, ಸೀಟು ಮ್ಯಾಟ್ರಿಕ್ಸ್ ಹೇಗಿರಬೇಕು ಎಂಬ ಬಗ್ಗೆ ಸಮಾನ ಕಾನೂನು ತರಬೇಕು. ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಬೇಕು ಎಂದು ಶರಣಪ್ರಕಾಶ್ ಪಾಟೀಲ್ ಆಗ್ರಹಿಸಿದರು.

ನೀಟ್ ಸೋರಿಕೆಯಾದ ಕಾರಣ 23 ಲಕ್ಷ ಮಕ್ಕಳು ಕಷ್ಟ ಅನುಭವಿಸುವಂತಾಗಿದೆ. ಕಳೆದ ನಾಲ್ಕೈದು ವರ್ಷದಿಂದ ಇದು ಪದೇ ಪದೆ ಆಗುತ್ತಿದೆ. ನಮ್ಮ ನಮ್ಮ ರಾಜ್ಯಗಳಿಗೆ ಪರೀಕ್ಷೆ ಮಾಡಲು ಅನುಮತಿ ನೀಡುವಂತೆ ಕೋರಿದ್ದೇವೆ. ಕೇಂದ್ರ ಸರ್ಕಾರನೂ ಈ ಬಗ್ಗೆ ವ್ಯವಸ್ಥೆ ಸರಿ ಮಾಡಬೇಕು. ನಾನೇ ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣ ಸಚಿವರುಗಳ ಸಭೆ ಮಾಡಲು ತೀರ್ಮಾನಿಸಿದ್ದೇವೆ. ರಾಜ್ಯದ ಬೇಡಿಕೆ ಏನು ಇರಬೇಕು. ಏನು ಸೂಕ್ತ ಸಲಹೆ ನೀಡಬೇಕು. ಪಾರದರ್ಶಕವಾಗಿ ಹೇಗೆ ನಿರ್ಣಯ ಮಾಡಬೇಕು ಎಂಬುದನ್ನು ಶಿಫಾರಸು ಮಾಡಲು ಮುಂದಾಗಿದ್ದೇವೆ. ಒಂದು ಸೂಕ್ತ ವ್ಯವಸ್ಥೆ ಹೇಗಿರಬೇಕು ಎಂಬುದನ್ನು ನಾವು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುತ್ತೇವೆ ಎಂದರು.

ಬೀಜ-ಗೊಬ್ಬರ ಕೊರತೆಯಾಗದಂತೆ ದದ್ದಲ್ ಖಡಕ್ ಸೂಚನೆ

ಎಸ್ಸಿ /ಎಸ್ಟಿ ಕಾಲೋನಿಗಳಿಗೆ ಮೂಲಸೌಕರ್ಯಕ್ಕೆ ಒತ್ತುಜೆಸ್ಕಾಂ ಇಲಾಖೆಯ ಪ್ರಗತಿ ಪರಿಶೀಲನೆ ವೇಳೆ ಮಾಸದೊಡ್ಡಿ ಗ್ರಾಮದ ಎಸ್ಸಿ /ಎಸ್ಟಿ ಕಾಲೋನಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ವಿಚಾರ ಚರ್ಚೆಗೆ ಬಂದಿತು. ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ, ಹಿಂದುಳಿದ ವರ್ಗಗಳ ಇಲಾಖೆ ಹಾಗೂ ಜೆಸ್ಕಾಂ ಅಧಿಕಾರಿಗಳು ಸಮನ್ವಯದೊಂದಿಗೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಸೂಚಿಸಲಾಯಿತು.

ಅಂಗನವಾಡಿ ಮತ್ತು ಆರೋಗ್ಯ ಸೇವೆಗಳ ಅಭಿವೃದ್ಧಿಗೆ ಆದ್ಯತೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪರಿಶೀಲನೆ ವೇಳೆ ಗ್ರಾಮೀಣ ಪ್ರದೇಶದಲ್ಲಿ 33 ಹೊಸ ಅಂಗನವಾಡಿ ಕೇಂದ್ರಗಳಿಗೆ ಕಟ್ಟಡಗಳ ಅಗತ್ಯವಿರುವ ಬಗ್ಗೆ ಮಾಹಿತಿ ನೀಡಲಾಯಿತು. ಅಂಗನವಾಡಿ ಕೇಂದ್ರಗಳ ಭೂ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಿಸುವಂತೆ ನಿರ್ದೇಶನ ನೀಡಲಾಯಿತು.

ಆರೋಗ್ಯ ಇಲಾಖೆಯಿಂದ ಮೂರು ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಅನುಮೋದನೆ ದೊರೆತಿರುವ ಮಾಹಿತಿ ನೀಡಲಾಗಿದ್ದು, ಅಗತ್ಯ ಜಾಗ ಗುರುತಿಸಿ ಶೀಘ್ರ ಕಾಮಗಾರಿ ಆರಂಭಿಸಲು ಸೂಚಿಸಲಾಯಿತು.

ಸಭೆಯಲ್ಲಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ್ ಪವಾರ್, ಆಡಳಿತಾಧಿಕಾರಿ ಅನಿತಾ ಆರ್., ತಹಶೀಲ್ದಾರ್ ಸುರೇಶ್ ವರ್ಮಾ, ಎಪಿಎಂಸಿ ಅಧ್ಯಕ್ಷ ಮಲ್ಲಿಕಾರ್ಜುನಗೌಡ ತಾಳಮರಿ, ಉಪಾಧ್ಯಕ್ಷ ಬಷೀರ್ ಅಹ್ಮದ್, ಡಿವೈಎಸ್‌ಪಿ ಶಾಂತವೀರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಭಾಗವಹಿಸಿದ್ದರು.

ಅಧಿಸೂಚನೆ ಹಿಂತೆಗೆದುಕೊಳ್ಳಲು ಆಗ್ರಹ

ಆಯೋಗದ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿಗೆ ಮಕ್ಕಳ ಹಕ್ಕು, ಬಾಲನ್ಯಾಯ, ಶಿಕ್ಷಣ, ಮಕ್ಕಳ ಅಭಿವೃದ್ಧಿ, ಆರೋಗ್ಯ, ಕಾನೂನು ಸೇರಿದಂತೆ ಸಂಬಂಧಿತ ಕ್ಷೇತ್ರಗಳಲ್ಲಿ ಕನಿಷ್ಠ ಹತ್ತು ವರ್ಷಗಳ ವೃತ್ತಿಪರ ಅನುಭವ ಮತ್ತು ಗಮನಾರ್ಹ ಸಾಧನೆ ಕಡ್ಡಾಯವಾಗಿವೆ ಎಂದು ತಿಳಿಸಿದರು.

ನೇಮಕಗೊಂಡಿರುವ ಕೆಲವರ ಕುರಿತು ಸಾರ್ವಜನಿಕ ವಲಯದಲ್ಲಿ ಲಭ್ಯವಾಗಿರುವ ಮಾಹಿತಿಯ ಪ್ರಕಾರ ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಅಗತ್ಯ ಅನುಭವ ಮತ್ತು ದಾಖಲೆಗಳು ಸ್ಪಷ್ಟವಾಗಿ ಕಾಣುತ್ತಿಲ್ಲ ಎಂದು ಆರೋಪಿಸಿದ ಅವರು, ಕೆಲ ಸದಸ್ಯರ ನೇಮಕಾತಿಯಿಂದ ಹಿತಾಸಕ್ತಿ ಸಂಘರ್ಷ ( ) ಉಂಟಾಗುವ ಸಾಧ್ಯತೆಯನ್ನೂ ಉಲ್ಲೇಖಿಸಿದರು.

ಮಕ್ಕಳ ಕಲ್ಯಾಣ ಸಮಿತಿ (), ಬಾಲನ್ಯಾಯ ಮಂಡಳಿ (), ಚೈಲ್ಡ್‌ಲೈನ್ ಸೇವೆಗಳು ಅಥವಾ ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆಗಳೊಂದಿಗೆ ಸಕ್ರಿಯವಾಗಿ ಕೆಲಸ ಮಾಡಿದ ದಾಖಲೆಗಳು ಲಭ್ಯವಿಲ್ಲ ಎಂಬ ಆಕ್ಷೇಪವನ್ನೂ ಅವರು ವ್ಯಕ್ತಪಡಿಸಿದರು.

ಆಯ್ಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ನ್ಯಾಯಸಮ್ಮತತೆ ಹಾಗೂ ನೇಮಕಾತಿ ನಿಯಮಗಳ ಪಾಲನೆ ಕುರಿತು ಗಂಭೀರ ಅನುಮಾನಗಳು ಮೂಡಿವೆ ಎಂದು ಆರೋಪಿಸಿದ ಜೆ.ಬಿ. ರಾಜ್, ಈ ಹಿನ್ನೆಲೆ ಸ್ವತಂತ್ರ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಅವರು ಮುಂದಿಟ್ಟ ಪ್ರಮುಖ ಬೇಡಿಕೆಗಳು ಹೀಗಿವೆ: 27-05-2026ರ ನೇಮಕಾತಿ ಅಧಿಸೂಚನೆ ಹಿಂತೆಗೆದುಕೊಳ್ಳಬೇಕು. ಅರ್ಹ ಹಾಗೂ ಅನುಭವ ಹೊಂದಿರುವವರನ್ನು ನೇಮಕ ಮಾಡಬೇಕು. ಆಯ್ಕೆ ಪ್ರಕ್ರಿಯೆ ಕುರಿತು ಸ್ವತಂತ್ರ ಮತ್ತು ಪಾರದರ್ಶಕ ತನಿಖೆ ನಡೆಸಬೇಕು. ತನಿಖೆ ಪೂರ್ಣಗೊಳ್ಳುವವರೆಗೆ ಸಂಬಂಧಿತ ಅಧಿಕಾರಿಗಳ ಪಾತ್ರವನ್ನು ಪರಿಶೀಲನೆಗೆ ಒಳಪಡಿಸಬೇಕು. ಆಯೋಗದ ವಿಶ್ವಾಸಾರ್ಹತೆ ಮತ್ತು ಸ್ವಾಯತ್ತತೆಯನ್ನು ಕಾಪಾಡಬೇಕು. ಪತ್ರಿಕಾಗೋಷ್ಠಿಯಲ್ಲಿ ಕೆ.ಪಿ. ಅನಿಲ್ ಕುಮಾರ್, ಎಂ. ನರಸಿಂಹಪ್ಪ, ವಿದ್ಯಾ ಪಾಟೀಲ್, ಜನಾರ್ಧನ್, ನಾಗರಾಜ, ಜಯಮ್ಮ ಹಾಗೂ ಶರಣಬಸವ ಉಪಸ್ಥಿತರಿದ್ದರು.

ಗ್ರಾಮ ಪಂಚಾಯಿತಿಗೆ ಮುತ್ತಿಗೆ ಹಾಕಿ ಪ್ರತಿಭಟನೆ

ಈ ಪ್ರಶ್ನೆಗೆ ಉತ್ತರ ಕೊಡುವಿರಾ.ಹೀಗಾದರೆ ಸರ್ವಜನಿಕರ ಗೋಳು ಕೇಳುವರು ಯಾರು?

ಕೇಂದ್ರ ಮತ್ತು ರಾಜ್ಯ ಸರಕಾರಗಳ ಯೋಜನೆಗಳು ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಬಾಪೂಜಿ ಸೇವಾ ಕೇಂದ್ರವನ್ನು ಸರ್ವಜನಿಕರಿಗೆ ಅನುಕೂಲವಾಗುವ ದೃಷ್ಟಿಕೋನದಿಂದ ಆರಂಭ ಮಾಡಿದ್ದು.ಬಾಪೂಜಿ ಸೇವಾ ಕೇಂದ್ರದಲ್ಲಿ ಸರ್ಕಾರ ಪಹಣಿ,ಮುಟೇಷನ್,ಜಾತಿ,ಆದಾಯ,ಭೂ ಹಿಡುವಳಿ, ಗೇಣಿ,ವಾಸ್ತಸ್ಥಳ,ಇನ್ನೂ ಅನೇಕ ಸೌಲಭ್ಯಗಳು ಸಮರ್ಪಕವಾಗಿ ಸಿಗುತ್ತಿಲ್ಲವೆಂದು ಆರೋಪಿಸಿದರು.

ಆನ್ವರಿ ಗ್ರಾಮ ಪಂಚಾಯಿತಿಯ ಡಾಟಾ ಎಂಟ್ರಿ ಆಪರೇಟರ್ ಬಸವರಾಜಸ್ವಾಮಿ ಹಿರೇಮಠ್ ಇವರು ಕಛೇರಿಗೆ ಬಾರದೆ ಮಸ್ಕಿ ಹಾಗೂ ಲಿಂಗಸಗೂರಿನಲ್ಲಿ ಕುಳಿತುಕೊಂಡು ಉದ್ಯೋಗ ಖಾತ್ರಿಯ ಎನ್ ಎಮ್ ಆರ್,ಹಾಕುವುದಕ್ಕೆ ಹಾಗೂ ಖಾತಾ ಉತ್ತಾರ ನೀಡಲು ಸಾರ್ವಜನಿಕರಿಂದ ತಲಾ ಒಬ್ಬರಿಗೆ 5000 ಸಾವಿರ ರೂ ಲಂಚ ಪಡೆಯುತ್ತಾನೆಂದು ಗ್ರಾಮಸ್ಥರು ತಿಳಿಸಿದ್ದಾರೆ.ಆನ್ವರಿ ಗ್ರಾಮ ಪಂಚಾಯಿತಿಯ ಪಿಡಿಓ ವೆಂಕೋಬ,ಡಾಟಾ ಎಂಟ್ರಿ ಅಪರೇಟರ್ ಬಸವರಾಜಸ್ವಾಮಿ ಹಿರೇಮಠ್ ಇವರ ಮೇಲೆ ಸಂಬಂಧಪಟ್ಟ ತಾಲೂಕ ಅಧಿಕಾರಿಗಳು ಕ್ರಮಕ್ಕೆ ಮುಂದಾಗುತ್ತಾರೆ ಇಲ್ಲವೂ ಕಾಡು ನೋಡಬೇಕಾಗಿದೆ?

ಆನ್ವರಿ ಗ್ರಾಮ ಪಂಚಾಯತಿಯಲ್ಲಿ ಉದ್ಯೋಗ ಖಾತ್ರಿ ಕಾಮಗಾರಿ ಮಾಡಿದ್ರೂ ಬೇಗನೇ ಕೂಲಿಕಾರರ ಹಣ ಪಾವತಿಸಬೇಕು ಗ್ರಾಮಸ್ಥರಾದ ಯಲ್ಲಮ್ಮ ಒತ್ತಾಯಿಸಿದರು.

ಸರ್ಕಾರದ ಆದೇಶದ ಮೇರೆಗೆ ಆನ್ವರಿ ಗ್ರಾಪಂಗೆ ಆಡಳಿತಾಧಿಕಾರಿ ನೇಮಕರಾದ ಮಾರ್ಟಿನ್ ರವರು ಕೂಲಿ ಕಾರ್ಮಿಕರ

ಸಮಸ್ಯೆ ಕುರಿತು ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತರುತ್ತೇನೆ ತಿಳಿಸಿದರು.

ಆನ್ವರಿ ಗ್ರಾಮ ಪಂಚಾಯತಿಯ ನಾಲ್ಕು ಗ್ರಾಮಗಳಲ್ಲಿ ಮೇ 2 ರಿಂದ ಪ್ರಾರಂಭವಾದ ಉದ್ಯೋಗಖಾತ್ರಿ ಕೆಲಸವು ಮೇ 30ಕ್ಕೆ ಮುಕ್ತಾಯವಾಗಿದ್ದು.ಸಮಾನ ಕೆಲಸಕ್ಕೆ ಸಮಾನ ವೇತನ ಪಾವತಿಸಬೇಕು ಎಂದು ಗ್ರಾಮದ ಯುವ ನಾಯಕ ಹನುಮಂತ ದೇಸಾಯಿ ಆಗ್ರಹಿಸಿದರು.

ಈ ಎಲ್ಲಾ ಸಮಸ್ಯೆಗಳನ್ನು ಪರಿಶೀಲಿಸಿದ ತಾಲೂಕು ಪಂಚಾಯತಿ ಇ ಓ ಉಮೇಶ್ ರವರು ಆನ್ವರಿ ಗ್ರಾಮ ಪಂಚಾಯತಿ ಪಿಡಿಓ ಹಾಗೂ ಬಸವರಾಜ್ ಹಿರೇಮಠ್ ರವರ ಮೇಲೆ ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇವೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಅಮರೇಶ ಬುಳ್ಳಾಪುರ,ಶಿವರಾಜ್, ಅಯ್ಯಳಪ್ಪ,ರೆಡ್ಡಪ್ಪ,ಹುಚ್ಚಪ್ಪ, ಮುತ್ತಮ್ಮ,ಅಮರಮ್ಮ,ಚಂದ್ರಕಲಾ, ರಾಮಮ್ಮ,ಬಸಮ್ಮ,ರೇಣುಕಾ ಗಂಗಮ್ಮ ಸೇರಿದಂತೆ ಇತರಿದ್ದರು.

ಬಳಗಾನೂರು ಪೊಲೀಸರ ಯಶಸ್ವಿ ಕಾರ್ಯಾಚರಣೆ

ಜಿ.ಚಂದ್ರಶೇಖರ ಪೊಲೀಸ್ ಉಪಾಧೀಕ್ಷಕರು, ಸಿಂಧನೂರು ಉಪ ವಿಭಾಗ ರವರ ಮಾರ್ಗದರ್ಶನದಲ್ಲಿ .ವಿನಾಯಕ ಸಿಪಿಐ ಸಿಂಧನೂರು ಗ್ರಾಮೀಣ ವೃತ್ತ ರವರ ನೇತೃತ್ವದಲ್ಲಿ ಎರಿಯಪ್ಪ ಪಿಎಸ್‌ಐ ಬಳಗಾನೂರು ಪೊಲೀಸ್ ಠಾಣೆ, ಸಿದ್ದಪ್ಪ ಎಎಸ್‌ಐ, ಲಿಂಗಪ್ಪ ಎಎಸ್‌ಐ, ವೆಂಕಟೇಶ ಹೆಚ್ ಸಿ-231, ನಿರುಪಾದಿ ಸಿಪಿಸಿ-403, ರಮೇಶ ಸಿಪಿಸಿ-126, ಮಂಜುನಾಥ ಸಿಪಿಸಿ-279, ಗೋಪಾಲ ಸಿಪಿಸಿ-95, ಪ್ರಕಾಶ ಸಿಪಿಸಿ-653 ರೇವಣಸಿದ್ದಪ್ಪ ಹೆಚ್ ಸಿ-144, ಮೌಲಹುಸೇನ್ ಹೆಚ್ ಸಿ-219, ರಾಮಪ್ಪ ಸಿಪಿಸಿ-183, ರವಿ, ದೇವಪ್ಪ, ದಯಾನಂದ, ಗೋಪಾಲ ಸಿಪಿಸಿ-679 ಮತ್ತು ಮಲ್ಲನಗೌಡ ಎಪಿಸಿ-101 ಸಿಡಿಆರ್ ವಿಭಾಗ ವಿಶೇಷ ತಂಡಗಳನ್ನು ರಚಿಸಿದ್ದು ಇತ್ತು.

ಈ ಅಧಿಕಾರಿಗಳ ಮತ್ತು ಸಿಬ್ಬಂಧಿಯವರ ತಂಡವು ಈ ಪ್ರಕರಣವನ್ನು ಗಂಭೀರವಾಗಿ ತಗಿದುಕೊಂಡು ಭೇದಿಸಿ 5 ಜನ ಆರೋಪಿತರಾದ 1) ಚನ್ನಬಸವ ಹೂಗಾರ, 2) ರಘುವೇಂದ್ರ ಗಿಂಡಿರಾಘು, 3) ಮೈಹೆಬೂಬ, ಸಾ: ಮಸ್ಕಿ, 04) ಮಹಮ್ಮದ್ ಲಾಲ್ ಪರಾಪೂರು, 5) ರಫೀಕ್ ವಿರುಪಾಪೂರು (ಎಪಿ)ರವರನ್ನು ಬಂದಿಸಿ 35.20 ಲಕ್ಷ ಬೆಲೆ ಬಾಳುವ ಸಾವಿರ ಬೆಲೆ ಬಾಲುವ 50 ಮೋಟರ್ ಸೈಕಲ್ ಜಪ್ತಿ ಮಾಡುವಲ್ಲಿ ಯಶಸ್ವಿಯಾಗಿರುತ್ತಾರೆ.

ಈ ಪತ್ತೆ ಕಾರ್ಯವನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರು, ರಾಯಚೂರು ರವರು ಶ್ಲಾಘನೆ ಮಾಡಿರುತ್ತಾರೆ.ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದರು.. ಈ ಸಂದರ್ಭದಲ್ಲಿ. ಡಿವೈಎಸ್ಪಿ ಚಂದ್ರಶೇಖರ್ . ಪಿಎಸ್‌ಐ ಎರಿಯಪ್ಪ ಪಿಐ ವಿನಾಯಕ. ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ರುದ್ರಪ್ಪ ಲಮಾಣಿಗೆ ಸಚಿವ ಸ್ಥಾನ ನೀಡಲು ಆಗ್ರಹಿಸಿ ಪ್ರತಿಭಟನೆ

ಅಲ್ಲದೆ, ಕಲ್ಯಾಣ ಕರ್ನಾಟಕ ಭಾಗದ ತಾಂಡಗಳ ಸಮಗ್ರ ಅಭಿವೃದ್ಧಿಗಾಗಿ ಕರ್ನಾಟಕ ತಾಂಡ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನವನ್ನು ಬಂಜಾರ ಸಮಾಜದ ಸಮರ್ಥ ನಾಯಕನಿಗೆ ನೀಡುವಂತೆ ಒತ್ತಾಯಿಸಲಾಯಿತು.

ಬಂಜಾರ ಸಮಾಜಕ್ಕೆ ನಿರಂತರವಾಗಿ ಆಗುತ್ತಿರುವ ಕಡೆಗಣಿಕೆಯನ್ನು ಖಂಡಿಸಿ ನಡೆದ ಈ ಪ್ರತಿಭಟನೆಯಲ್ಲಿ ಸರ್ಕಾರ ಸಮಾಜದ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯಮಟ್ಟದ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಎನ್. ಶಿಪ್ಲಾ ಪವಾರ್, ಲಚ್ಚಪ್ಪ ನಾಯಕ ಪವಾರ್, ಗೋವಿಂದ ಪವಾರ್, ಮೌನೇಶ ಪವಾರ್, ದೇವೇಂದ್ರಪ್ಪ ರಾಠೋಡ್, ಮೋನಪ್ಪ ಪವಾರ್, ಹರೀಶ್ ಚಂದ್ರ ರಾಠೋಡ್, ದೇವಪ್ಪ ರಾಠೋಡ್, ಕೃಷ್ಣ ಜಾಧವ, ವೆಂಕಟೇಶ ಪವಾರ್, ಅಮರೇಶ ರೈತನಗರ, ಲಾಲಪ್ಪ ರಾಠೋಡ್ ಸೇರಿದಂತೆ ವಿವಿಧ ತಾಲೂಕುಗಳ ಮುಖಂಡರು ಹಾಗೂ ಬಂಜಾರ ಸಮಾಜದ ನೂರಾರು ಜನರು ಭಾಗವಹಿಸಿದ್ದರು.

ಲಿಂಗಸುಗೂರು ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಅಡಿಗಲ್ಲು ಸಮಾರಂಭ

ಲಿಂಗಸಗೂರು.

ಲಿಂಗಸುಗೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಈ ಕೆಳ ಕಂಡ ಗ್ರಾಮಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯ ..., ... ಯೋಜನೆ ಅಡಿಯಲ್ಲಿ 2.50 ಕೋಟಿ ರೂಪಾಯಿಯ ಅನುದಾನದಲ್ಲಿ ಚಿತ್ತಾಪುರ, ನಾಗರಹಾಳ, ಹಾಲಕವಟಗಿ, ಅಮದಿಹಾಳ್, ಗ್ರಾಮಗಳಲ್ಲಿ ವಿಧಾನಪರಿಷತ್ ಸದಸ್ಯರಾದ ಸನ್ಮಾನ್ಯ ಶ್ರೀ ಶರಣಗೌಡ ಪಾಟೀಲ್ ಬಯ್ಯಾಪುರ ಚಾಲನೆ ನೀಡಿದರೂ .



★ಕ್ಷೇತ್ರದ ಅಭಿವೃದ್ಧಿ ಎಂದರೆ ನಿರಂತರ ಪ್ರಗತಿಯತ್ತ ಪ್ರಯಾಣಿಸುತ್ತಿರುವ ಸ್ಥಳೀಯ ಸಮುದಾಯದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಮೂಲಸೌಕರ್ಯಗಳ ಸಕ್ರೀಯ ಬೆಳೆವಿಕೆಯನ್ನು. ಇದು ಸ್ಥಳೀಯ ಜನರಿಗೆ ಉತ್ತಮ ಜೀವನಮಟ್ಟವನ್ನು ಒದಗಿಸಲು ಸಹಾಯಕವಾಗಿದೆ. ಕ್ಷೇತ್ರದ ಅಭಿವೃದ್ಧಿಯು ಅನೇಕ ಅಂಶಗಳನ್ನು ಒಳಗೊಂಡಿದ್ದೆ ಎಂದರು.

ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರದ ಸಹಾಯ, ಜನರ ಬದ್ಧತೆ ಮತ್ತು ಸ್ಥಳೀಯ ನಾಯಕರ ಮಾರ್ಗದರ್ಶನ ಅತ್ಯಂತ ಮುಖ್ಯ.

ಈ ಸಂದರ್ಭದಲ್ಲಿ ಶ್ರೀ ಭೂಪನಗೌಡ ಕರಡಕಲ್, ಶ್ರೀ ಪಾಮಯ್ಯ ಮುರಾರಿ, ಶ್ರೀ ಬಸವರಾಜಗೌಡ ಗಣೇಕಲ್, ಶ್ರೀ ಗುಂಡಪ್ಪ ನಾಯಕ್, ಶ್ರೀ ಸೋಮನಶೇಖರ್ ಐದನಾಳ, ಶ್ರೀ ಮಲ್ಲಣ್ಣ ನರಕಲದಿನ್ನಿ, ಶ್ರೀ ಹೊನ್ನಪ್ಪ ಮೇಟಿ, ಶ್ರೀ ಅನಿಷಾ ಪಾಶ, ಶ್ರೀ ಜಗದೀಶಗೌಡ ಹಾಲಭಾವಿ, ಶ್ರೀ ಪ್ರಕಾಶ್ ಕುರಿ, ಸಾಗರಗೌಡ , ಬಸಣ್ಣ ಜವಳಗೇರಿ, ಪಾಟೀಲ್, ಸಿದ್ದಪ್ಪ, ಶ್ರೀ ಚನ್ನಾರೆಡ್ಡಿ ಬಿರಾದರ್ ಆಪ್ತ ಸಹಾಯಕರು ಹಾಗೂ ಸ್ಥಳೀಯ ಮುಖಂಡರು, ಹಿರಿಯರು, ಯುವಕರು ಪಕ್ಷದ ಮುಖಂಡರು ಎಲ್ಲ ಸಮಸ್ತ ಜನತೆಯ ಜೊತೆಗೂಡಿ ಈ ಕಾರ್ಯವನ್ನು ನೆರವೇರಿಸಲಾಯಿತು.



ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು ವಿದ್ಯಾರ್ಥಿಗಳ ಸೈಕಲ್ ಜಾಥಾ

ಸಿರವಾರ ಜೂ 12-

ತಾಲೂಕಿನ ಕುರುಕುಂದಾ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳು ಸೈಕಲ್ ಮೂಲಕ ಜಾಗೃತಿ ಜಾಥಾ ನಡೆಸಿ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ಕಾರ್ಯಕ್ರಮದಲ್ಲಿ ಬಾಲಕಾರ್ಮಿಕ ಪದ್ಧತಿಯ ದುಷ್ಪರಿಣಾಮಗಳು, ಮಕ್ಕಳ ಶಿಕ್ಷಣದ ಮಹತ್ವ ಹಾಗೂ ಮಕ್ಕಳ ಹಕ್ಕುಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಸೈಕಲ್ ಜಾಥಾ ನಡೆಸಿದ ವಿದ್ಯಾರ್ಥಿಗಳು ಬಾಲಕಾರ್ಮಿಕತೆಯನ್ನು ತೊಡೆದುಹಾಕುವ ಸಂದೇಶ ಸಾರಿದರು.

ಕಾರ್ಯಕ್ರಮದಲ್ಲಿ ಮುಖ್ಯ ಗುರುಗಳಾದ ಪ್ರವೀಣ್, ಸಹ ಶಿಕ್ಷಕರಾದ ಶ್ರೀದೇವಿ, ಅತಿಥಿ ಶಿಕ್ಷಕರಾದ ಶಿವರಾಜ್, ಬಸವರಾಜ್, ಪೊಲೀಸ್ ಸಿಬ್ಬಂದಿ, ಅಂಗನವಾಡಿ ಕಾರ್ಯಕರ್ತೆಯರಾದ ಸುನೀತಾ ಹಾಗೂ ರತ್ನ, ದೊಡ್ಡಮ್ಮ, ರಂಗಪ್ಪ, ಗ್ರಾಮ ಪಂಚಾಯಿತಿ ಸಿಬ್ಬಂದಿ, ಶಾಲೆಯ ಶಿಕ್ಷಕರು, ಸಂಸ್ಥೆಯ ಕನ್ಸಲ್ಟೆಂಟ್ ಶಶಿಕಲಾ, ಗೀತಾ ಹಾಗೂ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬಾಲಕಾರ್ಮಿಕತೆಯನ್ನು ತಡೆಗಟ್ಟಲು ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಕಾರ್ಯಕ್ರಮದಲ್ಲಿ ಕರೆ ನೀಡಲಾಯಿತು.

ರುದ್ರಪ್ಪ ಲಮಾಣಿರಿಗೆ ಸಚಿವ ಸ್ಥಾನ ನೀಡಲು ಒತ್ತಾಯ

ವರ್ಹಿಸಿ ತಮ್ಮ ಆಡಳಿತ ಸಾಮ ರ್ಥ್ಯ, ಪ್ರಾಮಾಣಿಕತೆ ಹಾಗೂ ಜನಪರ ಕಾಳಜಿಯನ್ನು ರಾಜ್ಯದ ಜನರಿಗೆ ತೋರಿಸಿದ್ದಾರೆ ಎಂದರು. ರುದ್ರಪ್ಪ ಲಮಾಣಿ ಅವರು ಕೇವಲ ರಾಜಕೀಯ ನಾಯಕರಲ್ಲ, ಬಡ ವರು, ರೈತರು, ಕಾರ್ಮಿಕರು ಹಾಗೂ ಹಿಂದುಳಿದ ವರ್ಗಗಳ ಧ್ವನಿಯಾಗಿ ಕೆಲಸ ಮಾಡುತ್ತಿರುವ ಜನನಾಯಕರು. ವಿಶೇಷವಾಗಿ ಬಂಜಾರ ಹಾಗೂ ಲಂಬಾಣಿ ಸಮುದಾಯದ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಹಲವು ದಶಕಗಳಿಂದ ನಿರಂತರ ಹೋರಾಟ ನಡೆಸುತ್ತಾ ಬಂದಿದ್ದಾರೆ. ರಾಜ್ಯ ದಾದ್ಯಂತ ಬಂಜಾರ ಸಮಾಜ ದೊಡ್ಡ ಸಂಖ್ಯೆಯಲ್ಲಿ ವಾಸವಾಗಿದ್ದು, ಕಾಂಗ್ರೆಸ್ ಪಕ್ಷದ ಸಂಘಟನೆ ಹಾಗೂ ಚುನಾವಣಾ ಯಶಸ್ಸಿ ನಲ್ಲಿ ಮಹತ್ವ ದ ಪಾತ್ರ ವಹಿಸಿದೆ.

ರುದ್ರಪ್ಪ ಲಮಾಣಿ ಅವರಿಗೆ ಸಚಿವ ಸ್ಥಾನ ನೀಡಿದರೆ ಉತ್ತರ ಕರ್ನಾಟಕ ಭಾಗಕ್ಕೆ ಹಾಗೂ ಬಂಜಾರ ಸಮುದಾಯಕ್ಕೆ ಮತ್ತಷ್ಟು ಬಲ ಸಿಗುತ್ತದೆ ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಬಿ. ಅಮರೇಶ ರಾಥೋಡ್,ಸಿತಾರಾಮ ನಾಯಕ, ಗೋವಿಂದ ರಾಜು,ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ದಿ/ 14 ರಂದು ವಹಿದುದ್ದೀನ್ ರವರ ಸ್ಮರಣೆ ಗಾಗಿ ವಿಚಾರ ಸಂಕೀರ್ಣ ಹಾಗೂ ಪ್ರತಿಭಾ ಪುರಸ್ಕಾರ

ಕೊಪ್ಪಳ/ನಗರದ ಸರ್ಕಾರಿ ನೌಕರರ ಸಾಂಸ್ಕೃತಿಕ ಭವನದಲ್ಲಿ ದಿನಾಂಕ 14 ರ ರವಿವಾರ ಬೆಳಗ್ಗೆ 10.30 ಗಂಟೆಗೆ ಫೀರ ದೋಸ್ ಸಾಂಸ್ಕೃತಿಕ ಕ್ರೀಡೆ ಹಾಗೂ ತರಬೇತಿ ಸಂಸ್ಥೆ ಕೊಪ್ಪಳ ವತಿಯಿಂದ ಶಿಕ್ಷಣ ಪ್ರೇಮಿ ಶಿಕ್ಷಣ ತಜ್ಞ ಹಿರಿಯ ಉರ್ದು ಸಾಹಿತ್ಯ ಹಾಗೂ ಕೊಪ್ಪಳ ನಗರದ ಸರ್ಕಾರಿ ಟಿಸಿಎಚ್ ಕಾಲೇಜಿನ ನಿವೃತ್ತ ಉಪನ್ಯಾಸಕರಾದ ದಿವಂಗತ ಹಾಜಿ ವಹಿದುದ್ದೀನ್ ಅಹಮದ್ ರವರ ಸ್ಮರಣಾರ್ಥವಾಗಿ ಶಿಕ್ಷಣದಲ್ಲಿ ನೈತಿಕ ಮೌಲ್ಯ ವಿಷಯ ಕುರಿತು ವಿಚಾರ ಸಂಕೀರ್ಣ ಹಾಗೂ ಪ್ರಸಕ್ತ ಸಾಲಿನ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಗಣನೀಯ ಸಾಧನೆ ಮಾಡಿದ ವಿದ್ಯಾರ್ಥಿ ವಿದ್ಯಾರ್ಥಿನಿಯರ ಪ್ರತಿಭಾ ಪುರಸ್ಕಾರ ಸಮಾರಂಭ ಜರುಗಲಿದೆ,



ಸಮಾರಂಭದ ದಿವ್ಯ ಸಾನಿಧ್ಯವನ್ನು ನಗರದ ಪ್ರಮುಖ ಯೂಸೂಫಿಯ ಮಸೀದಿಯ ಪೇಶ್ ಇಮಾಮ ಮೌಲಾನ ಮುಫ್ತಿ ಮಹಮ್ಮದ್ ನಜೀರ್ ಅಹ್ಮದ್ ಖಾದ್ರಿ ತಸ್ಕಿನಿ ಹಾಗೂ ಕುಕನೂರಿನ ಶ್ರೀ ಅನ್ನದಾನೇಶ್ವರ ಸಂಸ್ಥಾನ ಶಾಖಾ ಮಠದ ಡಾಕ್ಟರ್ ಶ್ರೀ ಮಹಾದೇವ ದೇವರು ಸ್ವಾಮೀಜಿಯವರು ಸಾನಿಧ್ಯ ವಹಿಸಿ ಆಶೀರ್ವಚನ ನೀಡಲಿದ್ದಾರೆ,

ಜಿಲ್ಲಾ ನ್ಯಾಯಾಲಯದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾಗಿರುವ ಮಹಾಂತೇಶ್ ದರ್ಗದ್ ರವರು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಲಿದ್ದಾರೆ ,ಕೊಪ್ಪಳದ ಹಿರಿಯ

ವೈದ್ಯರಾದ ಡಾ.ಕೆ.ಜಿ ಕುಲಕರಣಿ, ನಗರ ಪೊಲೀಸ್ ಠಾಣೆಯ ಪೊಲೀಸ್ ಅಧಿಕಾರಿ ಡಿ ಸುರೇಶ್ ಸರ್ಕಾರಿ ನೌಕರ ಸಂಘದ ರಾಜ್ಯ ಹಿರಿಯ ಉಪಾಧ್ಯಕ್ಷರು ಹಾಗೂ ಕೊಪ್ಪಳ ಜಿಲ್ಲಾ ಅಧ್ಯಕ್ಷರಾದ ನಾಗರಾಜ ಜುಮ್ಮನ್ನವರ್ ಹಾಗೂ ಕೊಪ್ಪಳದ ಅನ್ನಪೂರ್ಣೇಶ್ವರಿ ಆಸ್ಪತ್ರೆಯ ವೈದ್ಯರಾದ ಡಾಕ್ಟರ್ ಕಸ್ತೂರಿ ವೀರೇಶ್ ಕರಮುಡಿ ರವರು ಕಾರ್ಯಕ್ರಮದಲ್ಲಿ ವಿಶೇಷ ಆಮಂತ್ರಿತರಾಗಿ ಪಾಲ್ಗೊಂಡು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಿದ್ದಾರೆ,


ಮುಖ್ಯ ಅತಿಥಿಗಳಾಗಿ ಜಿಲ್ಲೆಯ ಕನಕಗಿರಿ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕಿ ಡಾಕ್ಟರ್ ಪರ್ವಿನ್ ಬೇಗಂ, ಕೊಪ್ಪಳದ ನಾಗರತ್ನ ಶಿಕ್ಷಣ ಸೇವಾ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಡಾಕ್ಟರ್ ಅನಿಲ್ ಕುಮಾರ್ ಬೇಗಾರ್, ಹಿರಿಯ ಪತ್ರಕರ್ತ ಎಂ ಸಾಧಿಕ್ ಅಲಿ ಮತ್ತು ಕಾನೂನು ಮಾಪನ ಶಾಸ್ತ್ರ ಇಲಾಖೆಯ ನಿರೀಕ್ಷಕ ಎಂ ಬದಿಯುದ್ದೀನ್ ಅಹಮದ್ ನವೀದ ಪಾಲ್ಗೊಳ್ಳಲಿದ್ದು ಸಂಸ್ಥೆಯ ಅಧ್ಯಕ್ಷ ಮೊಮ್ಮದ್ ರಫಿಯು ದ್ದೀನ್ ಅಹಮದ್ ರವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಕಾರ್ಯಕ್ರಮದ ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿ ಸರ್ವರನ್ನು ಸ್ವಾಗತಿಸಿದ್ದಾರೆ,

ಶ್ರೀ ಕ್ಷೇತ್ರ ನೀಲಗಲ್ ಬೃಹನ್ಮಠಕ್ಕೆ ಮಹಾದ್ವಾರ ನಿರ್ಮಾಣಕ್ಕೆ ಭೂಮಿ ಪೂಜೆ

ಸಿರವಾರ:ಮಾನವಿ-ಸಿರವಾರ ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ. ಹಂಪಯ್ಯ ನಾಯಕ್ ಅವರ ಅನುದಾನದಡಿ, ಸಿರವಾರ ತಾಲೂಕಿನ ನೀಲಗಲ್ ಕ್ಯಾಂಪ್ ಮುಖ್ಯ ರಸ್ತೆಯಲ್ಲಿ ನಿರ್ಮಾಣವಾಗಲಿರುವ ಶ್ರೀ ಕ್ಷೇತ್ರ ನೀಲಗಲ್ ಶಾಂತಮಲ್ಲೇಶ್ವರ ಮಹಾಸಂಸ್ಥಾನ ಬೃಹನ್ಮಠದ ಮಹಾದ್ವಾರದ ಭೂಮಿ ಪೂಜಾ ಕಾರ್ಯಕ್ರಮವು ಇಂದು ಅತ್ಯಂತ ಭಕ್ತಿಪೂರ್ವಕವಾಗಿ ನೆರವೇರಿತು.

ಈ ಪವಿತ್ರ ಕಾರ್ಯಕ್ರಮವು ಶ್ರೀಮಠದ ಪೀಠಾಧಿಪತಿಗಳಾದ ಪರಮ ಪೂಜ್ಯ ಶ್ರೀ ಷ.ಬ್ರ. ಡಾ. ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಪರಮ ಪೂಜ್ಯ ಶ್ರೀ ಷ.ಬ್ರ. ಅಭಿನವ ರೇಣುಕ ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯ ಮತ್ತು ಅಮೃತ ಹಸ್ತದಿಂದ ಜರುಗಿತು.

ಈ ಸಂದರ್ಭದಲ್ಲಿ ಮಾತನಾಡಿದ ಭಕ್ತರು,



ಮಹಾದ್ವಾರದ ನಿರ್ಮಾಣಕ್ಕೆ ವಿಶೇಷ ಆಸಕ್ತಿ ವಹಿಸಿ ಅನುದಾನ ಬಿಡುಗಡೆ ಮಾಡಿಸಿದ ಶಾಸಕ ಜಿ. ಹಂಪಯ್ಯ ನಾಯಕ್ ಅವರಿಗೆ ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಸ್ಥಳೀಯ ಗ್ರಾಮದ ಮುಖಂಡರು, ವಿವಿಧ ಜನಪ್ರತಿನಿಧಿಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಅಪಾರ ಸಂಖ್ಯೆಯ ಸದ್ಭಕ್ತಾದಿಗಳು ಭಾಗವಹಿಸಿ ಪುನೀತರಾದರು.

ಸಿರುಗುಪ್ಪ: ವೇದಾವತಿ ಹಗರಿ ನದಿಗೆ ಮಾಜಿ ಶಾಸಕ ಎಂ ಎಸ್ ಸೋಮಲಿಂಗಪ್ಪ ಬಾಗಿನ ಅರ್ಪಿಸಿದರು

ಸಿರುಗುಪ್ಪ-ವೇದಾವತಿ ಹಗರಿ ನದಿಗೆ ಬಾಗಿನ ಅರ್ಪಣೆ ಎನ್ನುವುದು ಭಾರತೀಯ ಸಂಸ್ಕೃತಿಯಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಅತ್ಯಂತ ಪವಿತ್ರ ಮತ್ತು ಸಾಂಪ್ರದಾಯಿಕ ಧಾರ್ಮಿಕ ಆಚರಣೆಯಾಗಿದೆ ಬಾಗಿನ ಎಂದರೆ ಮುತ್ತೈದೆಯರಿಗೆ ಅಥವಾ ದೇವತೆಗಳಿಗೆ ಅರ್ಪಿಸುವ ಸೌಭಾಗ್ಯದ ವಸ್ತುಗಳ ಗೌರವಪೂರ್ವಕ ಕೊಡುಗೆಯಾಗಿದೆ ಎಂದು ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ ಎಸ್ ಸೋಮಲಿಂಗಪ್ಪ ತಿಳಿಸಿದರು



ತಾಲೂಕಿನ ವೇದಾವತಿ ಹಗರಿ ನದಿಗೆ ನಿರ್ಮಿಸಲಾದ ಮುದೇನೂರು-ಬಲಕುಂದಿ ಬ್ಯಾರೇಜ್ ನಲ್ಲಿ ನೀರು ತುಂಬಿದ ಹಿನ್ನೆಲೆಯಲ್ಲಿ ನದಿಗೆ ಬಾಗಿನ ಅರ್ಪಿಸಿ ಮಾತನಾಡಿದ ಅವರು ನದಿಗೆ ಬಾಗಿನ ಸಮರ್ಪಣೆ ಮಾಡುವುದು ಉತ್ತಮ ಮಳೆ ಬೆಳೆ ಮತ್ತು ನಾಡಿನ ಸಮೃದ್ಧಿಗೆ ಜಲದೇವತೆ ಕೃತಜ್ಞತೆ ಸಲ್ಲಿಸುವ ಸಂಪ್ರದಾಯವಾಗಿದೆ ವೇದಾವತಿ ಹಗರಿ ನದಿ ಪಾತ್ರದ ಜನರಿಗೆ ಬೆಳೆ ಬೆಳೆಯಲು ಪಶು ಪಕ್ಷಿಗಳಿಗೆ ನೀರೊದಗಿಸುವ ಉದ್ದೇಶದಿಂದ ಕಟ್ಟಲಾದ ಈ ಬ್ಯಾರೇಜ್ ಮಳೆಗಾಲದ ಆರಂಭಕ್ಕೆ ಮುನ್ನವೇ ತುಂಬಿರುವುದು ಶುಭ ಸೂಚನೆಯಾಗಿದೆ ಎಂದರು ಈ ಬಾರಿ ಬೇಸಿಗೆಯಲ್ಲಿ ನದಿ ಬತ್ತಿ ಹೋಗಿದ್ದರಿಂದ ಜನ ಜಾನುವಾರು ಗಳು ಮತ್ತು ಪಶು ಪಕ್ಷಿಗಳು ನೀರಿಲ್ಲದೆ ಪರದಾಡಿದ್ದರು ಆದರೆ ಮಳೆರಾಯ ಕೃಪೆ ತೋರಿದ್ದು ಬ್ಯಾರೇಜ್ ಭರ್ತಿಯಾಗಲು ಕಾರಣವಾಗಿದೆ ಮಳೆರಾಯನಿಗೆ ಮತ್ತು ಗಂಗಾ ಮಾತೆಗೆ ನಾವು ಯಾವತ್ತಿಗೂ ಕೃತಜ್ಞರಾಗಿರೋಣ ಎಂದರು

ಮಾಜಿ ಎ ಪಿ ಎಂ ಸಿ ಅಧ್ಯಕ್ಷ ಶಣಬಸವ, ತಾಲೂಕ ಪಂಚಾಯತ್ ಮಾಜಿ ಸದಸ್ಯ ಕೋರಿ ಪಿಡ್ಡಯ್ಯ, ಮುಖಂಡರಾದ ವೀರನಗೌಡ, ಬೆಳಗಲ್ ಬಸವರಾಜ, ಹನುಮಂತ, ನಟರಾಜ, ಮುರಳಿ ಮೋಹನ್ ರೆಡ್ಡಿ, ರಾಘವೇಂದ್ರ, ಮಂಜುನಾಥ, ಸಿದ್ದನಗೌಡ, ರಾರಾವಿ ಮಾರೇಶ, ಸೋಮನಾಯಕ, ಎಚ್.ಈರಣ್ಣ, ಮಂಜುನಾಥ, ಶೇಖಣ್ಣ, ಬೆಳಗಲ್ ಚಿರಂಜೀವಿ, ಶಿವಶಂಕರ್ ಮತ್ತು ಗ್ರಾಮಸ್ಥರು ಬಿಜೆಪಿ ಕಾರ್ಯಕರ್ತರು ಇದ್ದರು

ಶಾಲೆಯ 3 ಹೆಚ್ಚುವರಿ ಕೊಠಡಿ ಗಳ ಭೂಮಿ ಪೂಜೆಯನ್ನು ನೆರವೇರಿಸಿದ ಶಾಸಕ ನಾಗರಾಜ

ಸಿರುಗುಪ್ಪ- ತಾಲೂಕಿನ ಹಾವಿನಾಳು ಗ್ರಾಮದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 2025-26ನೇ ಸಾಲಿನ ಕೆ ಕೆ ಆರ್ ಡಿ ಬಿ ಅನುದಾನದ ಅಡಿಯಲ್ಲಿ 43.50 ಲಕ್ಷ ರೂ, ವೆಚ್ಚದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 3 ಹೆಚ್ಚುವರಿ ಕೊಠಡಿಗಳ ಭೂಮಿ ಪೂಜೆಯನ್ನು

ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕ ಬಿ.ಎಂ.ನಾಗರಾಜ ಅವರು ನೆರವೇರಿಸಿದರು

ಈ ಸಂದರ್ಭದಲ್ಲಿ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಗುರಪ್ಪ ಮುಖಂಡರುಗಳಾದ



ಶ್ರೀನಿವಾಸ್ ರಾವ್, ಸಿ ಎಂ ನಾಗರಾಜ ಸ್ವಾಮಿ, ಶಂಕ್ರಪ್ಪ, ನಾಗೇಂದ್ರಪ್ಪ, ಪೂಜಾರಿ ಸತ್ಯನಾರಾಯಣ, ಭರತ್, ಎರ್ರಿಸ್ವಾಮಿ, ಹನುಮಯ್ಯ, ಪೂಜಾರಿ ನಾಗರಾಜ, ಬಿ.ವೆಂಕಟೇಶ, ಹೆಚ್.ಗಣೇಶ್, ಪವನ್ ದೇಸಾಯಿ ಹಾಗೂ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕ ವೃಂದದವರು ಊರಿನ ಅನೇಕ ಮುಖಂಡರು ಪಾಲ್ಗೊಂಡಿದ್ದರು

ನಿಮ್ಮೂರು ಸುದ್ದಿ

ಸಂಪಾದಕೀಯ

ಗೃಹಿಣಿಯನ್ನು ಮನುಷ್ಯಳಂತೆ ಕಾಣಿರಿ, ರಾಷ್ಟ್ರ ನಿರ್ಮಾಪಕಿ ಎನ್ನುವುದು ಪೊಳ್ಳು ಮಾತು



ಮುಂದುವರಿದ ರಾಜ್ಯವಾದ ಕರ್ನಾಟಕದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಕಿ-ಅಂಶಗಳ ಪ್ರಕಾರ, 2023ರಲ್ಲಿ 830, 2024ರಲ್ಲಿ 804, 2025ರಲ್ಲಿ 650 ಬಾಲ್ಯವಿವಾಹ ಪ್ರಕರಣಗಳು ದಾಖಲಾಗಿವೆ. ದಾಖಲಾಗದ ಪ್ರಕರಣಗಳು ಅದೆಷ್ಟಿವೆಯೋ! ಇಷ್ಟೊಂದು ಬಾಲ್ಯ ವಿವಾಹವಾದ ಮಕ್ಕಳು ಬಾಲ ಅಮ್ಮಂದಿರಾಗಿ, ಬಾಲ ಗೃಹಿಣಿಯರಾಗಿ ರಾಷ್ಟ್ರನಿರ್ಮಾಣದ ಕೆಲಸ ಮಾಡುತ್ತಿದ್ದಾರೆ ಎನ್ನಲು ಸಾಧ್ಯವೇ?

''ಮನೆ, ಮಕ್ಕಳನ್ನು ನೋಡಿಕೊಳ್ಳುವ ಮಹಿಳೆ ಸಂಬಳವಿಲ್ಲದೆ ದುಡಿಯುತ್ತಾಳೆ. ಆಕೆಗೆ ಬರೀ ಗೃಹಿಣಿ ಪಟ್ಟ ಕೊಟ್ಟರೆ ಅದು ಸೂಕ್ತವಲ್ಲ. ಆಕೆ ಕೆಲಸ ರಾಷ್ಟ್ರ ನಿರ್ಮಾಣದ ಕೆಲಸ'' ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಹೇಳಿಕೆಯೇನೋ ಚೆನ್ನಾಗಿದೆ. ವಾಸ್ತವದಲ್ಲಿ ಮಹಿಳೆಯರ ಸ್ಥಾನಮಾನ, ಸಾರ್ವಜನಿಕ ನಡವಳಿಕೆಗಳು, ಮನೆ-ಕುಟುಂಬಗಳಲ್ಲಿ ಆಕೆಯ ಸ್ಥಾನಮಾನ ನೋಡಿದರೆ ರಾಷ್ಟ್ರನಿರ್ಮಾಪಕರಿಗೆ ಸಮಾನವಾಗಿ ಪರಿಗಣಿಸುವ ಸಮಾಜ ನಿರ್ಮಾಣವಾಗಲು ಅದೆಷ್ಟು ಶತಮಾನ ಕಾಯಬೇಕೋ! ಸದ್ಯ ಆಕೆಯನ್ನು ಮನುಷ್ಯಳು ಎಂದು ಪರಿಗಣಿಸುವ ದೊಡ್ಡತನ ತೋರಬೇಕಿದೆ ಸಮಾಜ.

ಶಿಕ್ಷಣ, ಉದ್ಯೋಗ, ಸ್ವಾವಲಂಬನೆ ಗಳಿಸಿದ ಮಹಿಳೆಯರನ್ನು ಈ ಸಮಾಜ ಉದಾಸೀನತೆಯಿಂದ ನೋಡುತ್ತಿರುವಾಗ ಗೃಹಿಣಿಯರನ್ನು ರಾಷ್ಟ್ರ ನಿರ್ಮಾಪಕರು ಎಂದು ಪರಿಗಣಿಸಬೇಕೆಂದು ಬಯಸುವುದೇ ಹಾಸ್ಯಾಸ್ಪದವಾದೀತು. ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ, ಆಕೆಯ ಘನತೆಯ ಮೇಲಿನ ದಾಳಿ, ಕನಿಷ್ಠ ಮನುಷ್ಯಳು ಎಂದು ಪರಿಗಣಿಸಲು ಒಪ್ಪದ ಪುರುಷಾಹಂಕಾರ; ದಿನದಿಂದ ದಿನಕ್ಕೆ ಮಹಿಳೆಯರ ಬದುಕು ಹೆಚ್ಚು ಹೆಚ್ಚು ಶೋಚನೀಯಗೊಳ್ಳುತ್ತಿದೆ.

ಐಎಎಸ್/ ಐಪಿಎಸ್‌ನಂತಹ ದೇಶದಲ್ಲಿಯೇ ಅತ್ಯುನ್ನತ ಸರ್ಕಾರಿ ಹುದ್ದೆಯಲ್ಲಿರುವ ಮಹಿಳಾ ಅಧಿಕಾರಿಗಳನ್ನೇ ಅವರ ಕೈ ಕೆಳಗೆ ಕೆಲಸ ಮಾಡುವ ಪುರುಷರು ಗೌರವಿಸದಿರುವ, ಲಘುವಾಗಿ ಪರಿಗಣಿಸುವ ಹಲವು ಉದಾಹರಣೆಗಳಿವೆ. ಅಧಿಕಾರಿ ಎಂಬುದನ್ನು ಪರಿಗಣಿಸದೇ ಅತ್ಯಾಚಾರ, ಕೊಲೆ ಮಾಡಿದ ಉದಾಹರಣೆಗಳು ಸಾಕಷ್ಟಿವೆ.

ಮಹಿಳೆಯರ ಆಸ್ತಿಯ ಹಕ್ಕನ್ನು ಇಂದಿಗೂ ಗೌರವಿಸುತ್ತಿಲ್ಲ. ಕಾಯಿದೆಯಲ್ಲಿದ್ದರೂ ಬಹುತೇಕ ಕಾಗದದಲ್ಲಿಯೇ ಉಳಿದು ಹೋಗಿದೆ. ಗಂಡ ಸತ್ತರೆ ಆತನ ಪಾಲಿನ ಆಸ್ತಿ ನೀಡಲು ನಿರಾಕರಿಸುವ ಕುಟುಂಬ ಆಕೆಯನ್ನು ತವರಿಗೆ ಅಟ್ಟುತ್ತಿದೆ. ಮನೆಯಲ್ಲಿ ಇಡೀ ದಿನ ಕೆಲಸದವಳಂತೆ ದುಡಿಯುವ ಹೆಣ್ಣಿಗೆ ಆಕೆಯ ಗಂಡನಿಂದಲೂ ಗೌರವ ಸಿಗುವ ಭರವಸೆಯಿಲ್ಲ. ಗಂಡ ಆಕೆಯ ನೆರವಿಗೆ ಬಂದರೆ, ಮನೆ ಕೆಲಸಕ್ಕೆ ನೆರವಾದರೆ ಆತನನ್ನು ಅದೇ ಪುರುಷ ಸಮಾಜ ಹೆಣ್ಣಿಗ ಎಂದು ಲೇವಡಿ ಮಾಡುತ್ತದೆ. ಗೃಹಿಣಿಯರ ಕತೆಗಳು ಒಂದೆಡೆಯಾದರೆ, ದುಡಿಯುವ ಮಹಿಳೆಯರ ಕಷ್ಟಗಳು ಒಂದೆರಡಲ್ಲ. ಬಹುತೇಕ ಮಧ್ಯಮ ವರ್ಗದ ಕುಟುಂಬಗಳು ಕೆಲಸದವರನ್ನು ಇಟ್ಟುಕೊಳ್ಳುತ್ತಿಲ್ಲ. ಮನೆಯೊಡತಿ ಬೆಳಗ್ಗೆದ್ದು ಅಡುಗೆ, ಗಂಡ ಮಕ್ಕಳ ಬೇಕು ಬೇಡಗಳನ್ನು ಪೂರೈಸಿ, ಹತ್ತು ಕೈಗಳಿರುವಂತೆ ಕೆಲಸ ಮಾಡಿ ಆಫೀಸಿಗೆ ಓಡಬೇಕು. ಬಸ್, ಆಟೋಗಳನ್ನು ಹಿಡಿದು ಕೆಲಸದ ಜಾಗ ಸೇರಿದರೆ ಅದೇ ಆಕೆಗೆ ಸಿಗುವ ವಿಶ್ರಾಂತಿ. ಕಚೇರಿ ಕೆಲಸ ಅಲ್ಲಿನ ಕಿರಿಕಿರಿ ಸಹಿಸಿಕೊಂಡು ಸಂಜೆ ಮತ್ತೆ ಮನೆಗೆ ಅದೇ ಧಾವಂತದಲ್ಲಿ ಓಡಬೇಕು. ಮತ್ತದೇ ಮನೆ ಮಂದಿ ಚಾಕರಿ. ಹೀಗೆ ಅದೆಷ್ಟು ಮಹಿಳೆಯರು ತಮಗೆ ವೈಯಕ್ತಿಕ ಬದುಕು ಇದೆ ಎಂಬುದನ್ನೇ ಮರೆತು ಬದುಕುತ್ತಿದ್ದಾರೆ. ಕಚೇರಿಯಲ್ಲಿ ದುಡಿಯುವ ಮಹಿಳೆ ಮತ್ತು ಕೂಲಿ ಕಾರ್ಮಿಕ ಮಹಿಳೆಯರ ಪರಿಸ್ಥಿತಿ ಹೆಚ್ಚು ಭಿನ್ನವಾಗಿಲ್ಲ. ಹೊರಗೆ ದುಡಿಯುವ ಮಹಿಳೆ ಮನೆಯ ಒಳಗೂ ಏಗುತ್ತಿದ್ದಾಳೆ.

ಈಗಲೂ ಭಾರತದಲ್ಲಿ ಬಾಲ್ಯವಿವಾಹ ಜಾರಿಯಲ್ಲಿದೆ. ಗ್ರಾಮೀಣ ಕುಟುಂಬಗಳಲ್ಲಿ ಪುಟ್ಟ ಬಾಲೆಯರಿಗೆ ಶಿಕ್ಷಣ ಕೊಡುವ ಬದಲು ಮಾಂಗಲ್ಯಭಾಗ್ಯ ಕೊಡಲಾಗುತ್ತಿದೆ. ಪುಟ್ಟ ಪುಟ್ಟ ಕನಸು ಕಂಗಳ ಬಾಲೆಯರು ಹದಿ ಹರೆಯ ಮುಗಿಯುವುದರೊಳಗೆ ಕಂಕುಳಲ್ಲಿ ಎರಡೆರಡು ಮಕ್ಕಳನ್ನು ಹೊತ್ತಿರುತ್ತಾರೆ. ಒಂದು ಕಡೆ ಗಂಡನ ದೈಹಿಕ ಬಯಕೆಗಳನ್ನು ತೀರಿಸಬೇಕು, ಬಸಿರು -ಬಾಣಂತನ ಅನುಭವಿಸಬೇಕು, ಗಂಡ ಮಕ್ಕಳ ಚಾಕರಿ ಹೀಗೆ ಚಿಕ್ಕ ವಯಸ್ಸಿನಲ್ಲಿ ಬೆಟ್ಟದಷ್ಟು ಹೊರೆ ಹೊರಿಸಿ ಆಕೆಯನ್ನು ಜೀವಂತ ಶವವಾಗಿಸಲಾಗುತ್ತಿದೆ. ಹೆಣ್ಣುಮಕ್ಕಳನ್ನು ಬೇಗ ಮದುವೆ ಮಾಡಿ ತಮ್ಮ ಜವಾಬ್ದಾರಿಯನ್ನು ಬೇರೆಯವರ ಹೆಗಲಿಗೆ ವರ್ಗಾಯಿಸುವ ಹೆತ್ತವರಿದ್ದಾರೆ. ಇದು ಸ್ವಂತ ಮಗಳನ್ನೇ ನರಕಕ್ಕೆ ತಳ್ಳುವ ದ್ರೋಹದ ಕೆಲಸ.

ಮುಂದುವರಿದ ರಾಜ್ಯವಾದ ಕರ್ನಾಟಕದಲ್ಲಿ ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಕಿ-ಅಂಶಗಳ ಪ್ರಕಾರ, 2023ರಲ್ಲಿ 830, 2024ರಲ್ಲಿ 804, 2025ರಲ್ಲಿ 650 ಬಾಲ್ಯವಿವಾಹ ಪ್ರಕರಣಗಳು ದಾಖಲಾಗಿವೆ. ದಾಖಲಾಗದ ಪ್ರಕರಣಗಳು ಅದೆಷ್ಟಿವೆಯೋ! ಇಷ್ಟೊಂದು ಬಾಲ್ಯ ವಿವಾಹವಾದ ಮಕ್ಕಳು ಬಾಲ ಅಮ್ಮಂದಿರಾಗಿ, ಬಾಲ ಗೃಹಿಣಿಯರಾಗಿ ರಾಷ್ಟ್ರನಿರ್ಮಾಣದ ಕೆಲಸ ಮಾಡುತ್ತಿದ್ದಾರೆ ಎನ್ನಲು ಸಾಧ್ಯವೇ?

ಈಗಲೂ ಆರೆಸ್ಸೆಸ್‌ನಂತಹ ಮನುವಾದಿ ಸಂಘಟನೆಗಳು ಮಹಿಳೆಯರ ಘನತೆಯ ಬದುಕು ನಿರಾಕರಿಸುವ ಹೇಳಿಕೆ ನೀಡುತ್ತಿವೆ. ಹೆಣ್ಣು ಮನೆ ವಾರ್ತೆ ನೋಡಿಕೊಂಡಿರಬೇಕು. ಅಂದ್ರೆ ಗಂಡಿನ ಅಡಿಯಾಳಾಗಿರಬೇಕು ಎಂಬ ಮನಸ್ಥಿತಿ ಬದಲಾಗಿಲ್ಲ. ಗಂಡು ಹುಟ್ಟುತ್ತಲೇ ಎಲ್ಲ ಅವಕಾಶ, ಹಕ್ಕು, ಅನುಕೂಲಗಳಿಗೆ ಭಾಜನನಾಗುತ್ತಾನೆ. ಹೆಣ್ಣನ್ನು ಕಟ್ಟುಪಾಡುಗಳಲ್ಲೇ ಬೆಳೆಸಲಾಗುತ್ತದೆ. ಮನೆ ಕೆಲಸ, ಅಡುಗೆ ಹೆಣ್ಣಷ್ಟೇ ಮಾಡಬೇಕು. ಗಂಡು ಉಂಡು ಓಡಾಡಿಕೊಂಡಿರಬೇಕು ಎಂಬ ಮನಸ್ಥಿತಿಯಿದೆ. ಹೆಣ್ಣಾಗಿರುವ ಕಾರಣಕ್ಕೆ ಆಕೆ ಎಲ್ಲಿ ಹೋಗಬೇಕು, ಹೋಗಬಾರದು, ಏನು ಉಡಬೇಕು, ಹೇಗೆ ನಗಬೇಕು ಎಂಬುದನ್ನು ಪುರುಷಪ್ರಧಾನ ಮನಸ್ಥಿತಿಗಳು ನಿರ್ಧರಿಸುವ ಈ ಸಮಾಜದಲ್ಲಿ, ಮನೆಗೆಲಸ ಮಾಡಿಕೊಂಡು ಬಿದ್ದಿರಬೇಕು ಎಂದು ಬಯಸುವ ಜನರ ಮಧ್ಯೆ ಆಕೆಯ ಕೆಲಸಕ್ಕೆ ಗೌರವ ಸಿಗುವುದು ಕನಸಿನ ಮಾತು.

ಸುಪ್ರೀಂ ಕೋರ್ಟ್ ಗೃಹಿಣಿಯ ಕೆಲಸವನ್ನು ರಾಷ್ಟ್ರನಿರ್ಮಾಣಕ್ಕೆ ಹೋಲಿಸಿದೆ. ಹಾಗೆಂದ ಮಾತ್ರಕ್ಕೆ ಇಂದಿನಿಂದಲೇ ಗೃಹಿಣಿಯರಿಗೆ ಎಲ್ಲಾ ಪುರುಷರು, ಕುಟುಂಬದವರು ಗೌರವ ಸಮ್ಮಾನ ಕೊಡುತ್ತಾರೆ ಎಂದು ನಿರೀಕ್ಷಿಸಲು ಸಾಧ್ಯವೇ? ಈ ದೇಶದ ಹಲವು ಹೈಕೋರ್ಟ್‌ಗಳು ಮಹಿಳೆಯ ಘನತೆಗೆ ಧಕ್ಕೆ ತರುವ ಹೇಳಿಕೆಗಳನ್ನು ನೀಡಿದ್ದೂ ಇದೆ. ಹೆಣ್ಣಿನ ಪೈಜಾಮದ ಲಾಡಿ ಎಳೆದರೆ ಅದು ಅತ್ಯಾಚಾರ ಯತ್ನ ಎನ್ನಲಾಗದು ಎಂದು ನ್ಯಾಯಾಧೀಶರೊಬ್ಬರು ಹೇಳಿದ್ದಾರೆ. ಸರಿಯಾದ ಕಾರಣಗಳಿಲ್ಲದೇ ಪತ್ನಿ ಲೈಂಗಿಕ ಸಂಭೋಗಕ್ಕೆ ನಿರಾಕರಿಸುವುದು ಮತ್ತು ವೈವಾಹಿಕ ಹಕ್ಕುಗಳನ್ನು ನಿರಾಕರಿಸುವುದು ಪತಿಯ ಮೇಲೆ ನಡೆಸುವ ಮಾನಸಿಕ ಕ್ರೌರ್ಯ ಎಂದು ಸುಪ್ರೀಂಕೋರ್ಟ್ ಇದೇ ಜೂನ್ 7ರಂದು ಹೇಳಿದೆ. ಅಸ್ವಾಭಾವಿಕ ಲೈಂಗಿಕ ಕ್ರಿಯೆಗೆ ಸಹಕರಿಸಬೇಕು ಎಂದು ಹೇಳುವುದು ಆಕೆಯ ಮೇಲಿನ ಮಾನಸಿಕ ಕ್ರೌರ್ಯ ಎಂದು ನ್ಯಾಯಾಧೀಶರಿಗೆ ಅನ್ನಿಸಿಯೇ ಇಲ್ಲವಲ್ಲ!. ಪುರುಷಹಂಕಾರ ರಕ್ತಗತವಾಗಿ ತಲೆಮಾರಿನಿಂದ ತಲೆಮಾರಿಗೆ ದಾಟುತ್ತಿರುವ ದಟ್ಟ ಲಕ್ಷಣಗಳಿವು.

ಕೂಲಿ ಕಾರ್ಮಿಕರಾಗಿ ಕೆಲಸ ಮಾಡುವ ಮಹಿಳೆಯರು ಪುರುಷರಿಗೆ ಸಮಾನವಾಗಿ ಕೆಲಸ ಮಾಡಿದರೂ ಪುರುಷನಿಗಿಂತ ಕಡಿಮೆ ವೇತನ ಕೊಡುವ ಕಡು ಅಸಮಾನತೆಯ ಸಮಾಜ ನಮ್ಮದು. ರೈತ ಮಹಿಳೆಯರು ಮನೆಗೆಲಸ, ಹೈನುಗಾರಿಕೆಯ ಜೊತೆಗೆ ಹೊಲದಲ್ಲೂ ದುಡಿಯುತ್ತಿದ್ದಾರೆ. ಆದರೆ ಆಕೆಯನ್ನು ರೈತ ಎಂದು ಪರಿಗಣಿಸಲ್ಲ. ಆಕೆ ಮಾಡಿದ ಕೆಲಸಕ್ಕೆ ಗೌರವವೂ ಇಲ್ಲ ಕೂಲಿಯೂ ಇಲ್ಲ. ಜಮೀನು ಮಹಿಳೆಯ ಹೆಸರಿನಲ್ಲಿ ಇರುವುದಿಲ್ಲ. ಗಂಡ ಸತ್ತರೆ ಮಗನ ಹೆಸರಿಗೆ ವರ್ಗಾವಣೆ ಮಾಡಲಾಗುತ್ತದೆ. ತವರಿನಲ್ಲೂ, ಗಂಡನ ಮನೆಯಲ್ಲೂ ಆಕೆ ಆಸ್ತಿ ವಂಚಿತಳು. ರಾಷ್ಟ್ರ ನಿರ್ಮಾಣ ಬಿಡಿ, ಸದೃಢ ಕುಟುಂಬ ನಿರ್ಮಾಣದಲ್ಲಿ ಆಕೆಯನ್ನು ಪರಿಗಣಿಸಲ್ಲ.

ಮಹಾರಾಷ್ಟ್ರದ ಛತ್ರಪತಿ ಸಾಂಬಾಜಿ ನಗರದಲ್ಲಿ ರೈತನೊಬ್ಬ ಉಳುಮೆಗೆ ಬಳಸುತ್ತಿದ್ದ ಒಂದು ಎತ್ತು ಸತ್ತಿತೆಂದು ಮತ್ತೊಂದು ಎತ್ತು ಕೊಳ್ಳಲಾಗದೇ, ಮುಂಗಾರು ಕಾಲಿಡುತ್ತಿದ್ದಂತೆ ಉಳುಮೆ ಮಾಡದೇ ಹೆಚ್ಚು ದಿನ ಕಾಯಲೂ ಆಗದೇ ತನ್ನ ಪತ್ನಿಯನ್ನು ಮತ್ತೊಂದು ಎತ್ತಿನ ಬದಲಿಗೆ ನೊಗ ಎಳೆಯಲು ಹಚ್ಚಿದ್ದ. ಈ ಕರುಣಾಜನಕ ಪರಿಸ್ಥಿತಿಯ ಫೋಟೋಗಳು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆದ ನಂತರ ಸರ್ಕಾರದ ಗಮನಕ್ಕೆ ಬಂದು ರೈತನಿಗೆ ಎತ್ತು ಕೊಡಿಸಲಾಯಿತು. ಹೆಣ್ಣಿನ ಶೋಷಣೆಗೆ ಇದೊಂದು ಪ್ರಾತಿನಿಧಿಕ ರೂಪಕ ಮಾತ್ರ. ಇಂತಹ ಹತ್ತು ಹಲವು ಮನುಷ್ಯತ್ವ ಮೀರುವ ಪರಿಸ್ಥಿತಿಗೆ ಹೆಣ್ಣುಮಕ್ಕಳು ತಮ್ಮನ್ನು ತಾವು ಅರ್ಪಿಸಿಕೊಳ್ಳುತ್ತಿದ್ದಾರೆ. ಆದರೆ ಅದಕ್ಕೆ ಒಂದು ಕೃತಜ್ಞತೆಯ ಧನ್ಯವಾದವನ್ನು ಕೂಡ ಆಕೆ ನಿರೀಕ್ಷಿಸುವಂತಿಲ್ಲ. ಅದು ಹೆಣ್ಣಿನ ಸಹಜ ಸ್ವಾಭಾವಿಕ ಕರ್ತವ್ಯ ಎಂಬ ಮುದ್ರೆಯನ್ನು ಸ್ತ್ರೀ ಪುರುಷರಿಬ್ಬರ ಮಿದುಳಿಗೆ ಒತ್ತಿ ಅಚ್ಚು ಮಾಡಲಾಗಿದೆ.

ಪಾಶ್ಚಿಮಾತ್ಯರ ಪ್ರಭಾವ ನಮ್ಮ ಊಟ, ಉಡುಗೆ, ಜೀವನಶೈಲಿಯಲ್ಲಿ ಮಾತ್ರ ಕಾಣುತ್ತಿದೆ. ಎಷ್ಟೇ ಓದಿರಲಿ, ಎಂತಹ ಹುದ್ದೆಯಲ್ಲಿರಲಿ ಸ್ತ್ರೀ ಪುರುಷರ ಸಮಾನತೆಯ ವಿಚಾರಕ್ಕೆ ಬಂದರೆ ಅದೇ ತಾತ ಮುತ್ತಾತರು ಹಾಕಿದ ಆಲದ ಮರಕ್ಕೆ ನೇಣು ಹಾಕಿಕೊಳ್ಳುವುದಷ್ಟೇ. ಇಂತಹ ಊಳಿಗಮಾನ್ಯ ಮನಸ್ಥಿತಿಯನ್ನು ಹೋಗಲಾಡಿಸುವಂಥ ಪಠ್ಯಗಳು, ಸಿನಿಮಾಗಳು ಹೆಚ್ಚು ಹೆಚ್ಚು ಬರಬೇಕು. ಶಾಲೆಗಳಲ್ಲಿ ಮಕ್ಕಳಿಗೆ ಲಿಂಗ ಸಮಾನತೆಯ ಪಾಠ, ಅಮ್ಮಂದಿರ ಕೆಲಸದ ಬಗ್ಗೆ ಕೃತಜ್ಞತೆ, ಗೌರವದ ಭಾವ ಮೂಡುವಂತಾಗಬೇಕು.

ಬಿಜೆಪಿಯ ರಾಜಕೀಯದಾಟ; ನಿರಂತರ ಹಿಂಸಾಚಾರದ ಜ್ವಾಲೆಯಲ್ಲಿ ಕಮರುತ್ತಿರುವ ಮಣಿಪುರ

ರಾಜಕೀಯ ರ್ಯಾಲಿಗಳಲ್ಲಿ ಬ್ಯುಸಿಯಾಗಿದ್ದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಣಿಪುರದ ತಾಯಂದಿರ ಕಣ್ಣೀರು ಕಾಣಿಸಲಿಲ್ಲ. ನಾಗರಿಕರ ರಕ್ಷಣೆಗಿಂತ ಚುನಾವಣಾ ಗೆಲುವು ಮತ್ತು ಧ್ರುವೀಕರಣದ ರಾಜಕಾರಣವೇ ಮುಖ್ಯವಾದಾಗ ದೇಶದ ಒಂದು ರಾಜ್ಯ ಹೇಗೆ ಹಿಂಸಾಚಾರದ ಬೀಡಾಗಬಹುದು ಎಂಬುದಕ್ಕೆ ಮಣಿಪುರವೇ ಸಾಕ್ಷಿ.

ಈಶಾನ್ಯ ಭಾರತದ ಅತ್ಯಂತ ಸುಂದರ ರಾಜ್ಯಗಳಲ್ಲಿ ಮಣಿಪುರವೂ ಒಂದು. ಈಶಾನ್ಯ ಭಾರತದ ಜ್ಯುವೆಲ್ ಲ್ಯಾಂಡ್ (ರತ್ನಗಳ ನಾಡು) ಎಂದೇ ಪ್ರಸಿದ್ಧವಾಗಿರುವ ಮಣಿಪುರವು ಪ್ರಕೃತಿಯ ಸೊಬಗು, ಹಚ್ಚಹಸಿರಿನ ಬೆಟ್ಟಗಳು, ಮತ್ತು ವಿಶಿಷ್ಟ ಸಂಸ್ಕೃತಿಯಿಂದಾಗಿ ಪ್ರವಾಸಿಗರ ಸ್ವರ್ಗ. ಆದರೆ ಕಳೆದ ಮೂರು ವರ್ಷಗಳಿಂದ ಮಣಿಪುರ ನಿರಂತರವಾಗಿ ಹಿಂಸಾಚಾರದ ಜ್ವಾಲೆಯಲ್ಲಿ ಬೇಯುತ್ತಿದೆ.

ಈ ಹಿಂಸಾಚಾರವು ಬರೀ ಎರಡು ಸಮುದಾಯಗಳ ನಡುವಿನ ಜನಾಂಗೀಯ ಸಂಘರ್ಷವಲ್ಲ. ಬದಲಾಗಿ ಆಡಳಿತಾರೂಢ ಬಿಜೆಪಿ ಸರ್ಕಾರದ ರಾಜಕೀಯ ಇಚ್ಛಾಶಕ್ತಿಯ ಕೊರತೆ, ಆಡಳಿತಾತ್ಮಕ ವೈಫಲ್ಯ ಮತ್ತು ಒಡೆದು ಆಳುವ ರಾಜಕೀಯದ ದಟ್ಟ ನೆರಳು ಎಂಬುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಬಿಜೆಪಿಯ ರಾಜಕೀಯದಾಟವು ಸಾಮಾನ್ಯ ಜನರ ಬದುಕನ್ನು ನರಕವಾಗಿಸಿದೆ.

ಮಣಿಪುರದಲ್ಲಿ ಬಹುಸಂಖ್ಯಾತ ಕಣಿವೆ ಪ್ರದೇಶದ ಮೈತೇಯಿ ಮತ್ತು ಗುಡ್ಡಗಾಡು ಪ್ರದೇಶದ ಬುಡಕಟ್ಟು ಸಮುದಾಯಗಳಾದ ಕುಕಿ-ಜೋ ಹಾಗೂ ನಾಗಾ ಸಮುದಾಯಗಳ ನಡುವೆ ದಶಕಗಳಿಂದ ಭಿನ್ನಾಭಿಪ್ರಾಯಗಳಿವೆ. ಆದರೆ ಈ ಭಿನ್ನಾಭಿಪ್ರಾಯವು 250ಕ್ಕೂ ಅಧಿಕ ಮಂದಿಯ ಪ್ರಾಣವನ್ನು ಬಲಿ ಪಡೆಯುವಷ್ಟು ಮಟ್ಟಕ್ಕೆ ತಿರುಗಲು ಪ್ರಮುಖವಾಗಿ ಬಿಜೆಪಿಯ ರಾಜಕೀಯ ಪ್ರಚೋದನೆಯೇ ಕಾರಣ.

ಮೈತೇಯಿ ಸಮುದಾಯಕ್ಕೆ ಪರಿಶಿಷ್ಟ ಪಂಗಡ () ಸ್ಥಾನಮಾನ ನೀಡುವ ಕುರಿತಾದ ಹೈಕೋರ್ಟ್ ಆದೇಶ ನೀಡಿತು. ಅದಕ್ಕೆ ರಾಜ್ಯದ ಬಿಜೆಪಿ ಸರ್ಕಾರ ತೋರಿದ ತರಾತುರಿಯ ಬೆಂಬಲವು ಬುಡಕಟ್ಟು ಸಮುದಾಯಗಳಲ್ಲಿ ತೀವ್ರ ಆತಂಕ ಮೂಡಿಸಿತು. ಈ ಹಿಂದೆಯೇ ಬುಡಕಟ್ಟು ಜನರ ವಿರುದ್ಧ ಕೈಗೊಂಡಿದ್ದ ಕೆಲವು ಒತ್ತುವರಿ ತೆರವು ಕಾರ್ಯಾಚರಣೆಗಳು ಜನಾಂಗೀಯ ಭಿನ್ನಾಭಿಪ್ರಾಯವನ್ನು ಮತ್ತಷ್ಟು ಹೆಚ್ಚಿಸಿತು. ಇದರ ಬೆನ್ನಲ್ಲೇ 2023ರ ಮೇ 3ರಂದು ಬುಡಕಟ್ಟು ವಿದ್ಯಾರ್ಥಿ ಸಂಘಟನೆಯು () ಹಮ್ಮಿಕೊಂಡಿದ್ದ ಪ್ರತಿಭಟನಾ ರ್ಯಾಲಿಯು ಹಿಂಸಾಚಾರಕ್ಕೆ ತಿರುಗಿ, ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವೆ ದೊಡ್ಡ ಮಟ್ಟದ ಜನಾಂಗೀಯ ದಂಗೆ ನಡೆಯಿತು.

ಇವೆಲ್ಲವುದರ ನಡುವೆ ಗುಡ್ಡಗಾಡು ಪ್ರದೇಶಗಳಲ್ಲಿರುವ ನೈಸರ್ಗಿಕ ಸಂಪನ್ಮೂಲಗಳು ಮತ್ತು ಕಾರ್ಪೊರೇಟ್ ಹಿತಾಸಕ್ತಿಗಳಿಗೆ ದಾರಿ ಮಾಡಿಕೊಡಲು ಬುಡಕಟ್ಟು ಜನರನ್ನು ಒಕ್ಕಲೆಬ್ಬಿಸುವ ಪ್ರಕ್ರಿಯೆಗಳನ್ನು ಬಿಜೆಪಿ ಸರ್ಕಾರ ನಡೆಸಿದೆ ಎಂಬ ಗಂಭೀರ ಆರೋಪಗಳೂ ಕೇಳಿಬಂದಿವೆ.

ಡಬಲ್ ಇಂಜಿನ್ ಸರ್ಕಾರ ಮಾಡಿದ್ದೇನು?

ಕೇಂದ್ರ ಮತ್ತು ರಾಜ್ಯ ಎರಡರಲ್ಲೂ ಒಂದೇ ಪಕ್ಷದ (ಬಿಜೆಪಿ) ಆಡಳಿತವಿದ್ದರೆ ಅಭಿವೃದ್ಧಿ ಮತ್ತು ಭದ್ರತೆ ಸುಲಭವಾಗುತ್ತದೆ ಎಂಬ ''ಡಬಲ್ ಇಂಜಿನ್ ಸರ್ಕಾರ''ದ ಘೋಷಣೆ ಮಣಿಪುರದಲ್ಲಿ ಸಂಪೂರ್ಣವಾಗಿ ಮಕಾಡೆ ಮಲಗಿದೆ. ಮಾಜಿ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರ ಅವಧಿಯಲ್ಲಿ ಜನಾಂಗೀಯ ಧ್ರುವೀಕರಣ ಹೆಚ್ಚಾಯಿತು. ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿಯಿತು. ಇದೇ ಕಾರಣಕ್ಕೆ ಬಿರೇನ್ ಸಿಂಗ್ ರಾಜೀನಾಮೆ



ನೀಡಿದರು. ಒಂದು ವರ್ಷಗಳ ಕಾಲ ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತವಿತ್ತು.

ಇತ್ತೀಚೆಗೆ 2026ರ ಆರಂಭದಲ್ಲಿ ಯೂಮ್ನಮ್ ಖೇಮ್ಚಂದ್ ಸಿಂಗ್ ನೇತೃತ್ವದ ಹೊಸ ಬಿಜೆಪಿ ಸರ್ಕಾರ ರಚನೆಯಾಗಿದೆ. ಆದರೆ ಪರಿಸ್ಥಿತಿಯಲ್ಲಿ ಯಾವುದೇ ಮಹತ್ತರ ಬದಲಾವಣೆ ಬಂದಿಲ್ಲ. ಕೇವಲ ಮುಖಗಳು ಬದಲಾಗಿವೆಯೇ ಹೊರತು ಆಡಳಿತದ ನೀತಿಗಳು ಬದಲಾಗಿಲ್ಲ. 2026ರ ಮಣಿಪುರ ಸರ್ಕಾರದಲ್ಲಿ ಮೈತೇಯಿ ಸಮುದಾಯದವರ ಸಂಖ್ಯೆ ಹೆಚ್ಚಾಗಿದೆ. ಇದಕ್ಕೆ ಕುಕಿ ಸಮುದಾಯದ ವಿರೋಧವಿದೆ. ಇನ್ನೊಂದೆಡೆ ತಮ್ಮ ಬೇಡಿಕೆಗಳು ಈಡೇರಿಸುವವರೆಗೂ ಸರ್ಕಾರ ರಚನೆಗೆ ನಮ್ಮ ಒಮ್ಮತವಿಲ್ಲ ಎಂದು ಸಂಘಟನೆಗಳು ಹೇಳಿವೆ.

ಇಷ್ಟು ದೊಡ್ಡ ಮಟ್ಟದ ಮಾನವೀಯ ದುರಂತ ಸಂಭವಿಸುತ್ತಿದ್ದರೂ ಪ್ರಧಾನಿ ನರೇಂದ್ರ ಮೋದಿ ಅವರು ತೋರಿದ ಉದಾಸೀನತೆ ಅಸಮರ್ಥನೀಯ. 2023ರಲ್ಲಿ ಹಿಂಸಾಚಾರ ನಡೆದಿದ್ದರೂ ಪ್ರಧಾನಿ ಮೋದಿ ಮಾತ್ರ 2025ರವರೆಗೂ ಒಂದೇ ಒಂದು ಬಾರಿ ಮಣಿಪುರಕ್ಕೆ ಭೇಟಿ ನೀಡಿರಲಿಲ್ಲ, ಜನರ ನೋವಿಗೆ ಸ್ಪಂದಿಸಿರಲಿಲ್ಲ. ತುಟಿಯೂ ಬಿಚ್ಚಿರಲಿಲ್ಲ. ಈ ವಿಚಾರದಲ್ಲೇ ವಿಪಕ್ಷಗಳ ಟೀಕೆಗೆ ಗುರಿಯಾಗಿದ್ದರು. ರಾಜಕೀಯ ರ್ಯಾಲಿಗಳಲ್ಲಿ ಬ್ಯುಸಿಯಾಗಿದ್ದ ಪ್ರಧಾನಿ ಮೋದಿ ಅವರಿಗೆ ಮಣಿಪುರದ ತಾಯಂದಿರ ಕಣ್ಣೀರು ಕಾಣಿಸಲಿಲ್ಲ. ಹಿಂಸಾಚಾರ ಆರಂಭವಾಗಿ ಎರಡು ವರ್ಷಗಳ ನಂತರ ವಿಪಕ್ಷಗಳ ಒತ್ತಡಕ್ಕೆ ಮಣಿದು 2025ರ ಸೆಪ್ಟೆಂಬರ್ 13ರಂದು ಮೊದಲ ಬಾರಿಗೆ ಮಣಿಪುರಕ್ಕೆ ಅಧಿಕೃತ ಭೇಟಿ ನೀಡಿದ್ದರು.

ಬಿಜೆಪಿಯ ರಾಜಕೀಯ ಮತ್ತು ಸರ್ಕಾರದ ನಿಷ್ಕ್ರಿಯತೆಯು ಮಣಿಪುರದ ಪ್ರತಿ ನಾಗರಿಕನ ಬದುಕನ್ನೂ ಛಿದ್ರಗೊಳಿಸಿದೆ. ಅಧಿಕೃತ ಅಂಕಿ-ಅಂಶಗಳ ಪ್ರಕಾರವೇ ಈ ಸಂಘರ್ಷದಲ್ಲಿ 250ಕ್ಕೂ ಅಧಿಕ ಅಮಾಯಕರು ಜೀವ ಕಳೆದುಕೊಂಡಿದ್ದಾರೆ ಮತ್ತು ಸಾವಿರಾರು ಜನರು ಗಾಯಗೊಂಡಿದ್ದಾರೆ. ಮಣಿಪುರವು ಪ್ರಸ್ತುತ ಭೌಗೋಳಿಕವಾಗಿ ಮತ್ತು ಮಾನಸಿಕವಾಗಿ ಮೂರು ಭಾಗಗಳಾಗಿ ಒಡೆದು ಹೋಗಿದೆ. ಕುಕಿ ಹೋಮ್‌ಲ್ಯಾಂಡ್, ನಾಗಾ ಪ್ರದೇಶ ಮತ್ತು ಮೈತೇಯಿ ಕಣಿವೆ ಎಂದು ವಿಭಜನೆಯಾಗಿದ್ದು ಸಮುದಾಯಗಳ ನಡುವೆ ಇದ್ದ ಸಾಮರಸ್ಯ ಸಂಪೂರ್ಣವಾಗಿ ಕಣ್ಮರೆಯಾಗಿದೆ.

ಸುಮಾರು 60,000ಕ್ಕೂ ಹೆಚ್ಚು ಮಂದಿ ತಮ್ಮ ಸ್ವಂತ ಮನೆಗಳನ್ನು ಕಳೆದುಕೊಂಡು ನಿರಾಶ್ರಿತರ ಶಿಬಿರಗಳಲ್ಲಿ ಅತ್ಯಂತ ಶೋಚನೀಯ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಅವರ ಪುನರ್ವಸತಿಗೆ ಸರ್ಕಾರವು ದೃಢವಾದ ಕ್ರಮವನ್ನೂ ಕೈಗೊಳ್ಳುತ್ತಿಲ್ಲ. ಅದೆಷ್ಟೋ ಮಹಿಳೆಯರ ಮೇಲೆ ಅತ್ಯಾಚಾರ, ಲೈಂಗಿಕ ದೌರ್ಜನ್ಯಗಳಾಗಿವೆ. ಮಾನವ ಹಕ್ಕುಗಳ ಉಲ್ಲಂಘನೆ ಇಲ್ಲಿ ನಿರಂತರವಾಗಿ ನಡೆಯುತ್ತಿದೆ. ಇಂಟರ್ನೆಟ್‌ನ ದೀರ್ಘಾವಧಿಯ ನಿಷೇಧ, ಪದೇ ಪದೇ ಜಾರಿಯಾಗುವ ಕರ್ಫ್ಯೂಗಳು ವ್ಯಾಪಾರ-ವಹಿವಾಟನ್ನು ಸಂಪೂರ್ಣವಾಗಿ ನಾಶಪಡಿಸಿವೆ. ಶಾಲಾ-ಕಾಲೇಜುಗಳು ಮುಚ್ಚಿರುವುದರಿಂದ ಒಂದು ಇಡೀ ಪೀಳಿಗೆಯ ಭವಿಷ್ಯವೇ ಕತ್ತಲಿಗೆ ತಳ್ಳಲ್ಪಟ್ಟಿದೆ.

ಇಂದು ಈ ಹಿಂಸಾಚಾರವು ಕೇವಲ ಮೈತೇಯಿ ಮತ್ತು ಕುಕಿ ಸಮುದಾಯಗಳಿಗೆ ಸೀಮಿತವಾಗಿ ಉಳಿದಿಲ್ಲ. ನಾಗಾ ಸಮುದಾಯದ ಜನರ ಅಪಹರಣ ಮತ್ತು ಕೊಲೆಗಳ ಘಟನೆಗಳು ಸಂಭವಿಸುತ್ತಿದೆ. ಇದರಿಂದಾಗಿಸಂಘರ್ಷದ ಬೆಂಕಿ ಮತ್ತಷ್ಟು ವ್ಯಾಪಿಸುತ್ತಿದೆ. ಡ್ರಗ್ಸ್ ಸಾಗಣೆಯ ಮಾರ್ಗಗಳು, ಗಡಿ ಭದ್ರತೆಯ ಲೋಪಗಳು ಮತ್ತು ಉಗ್ರಗಾಮಿ ಗುಂಪುಗಳಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಸುಲಭವಾಗಿ ಸಿಗುತ್ತಿರುವುದು ಪರಿಸ್ಥಿತಿಯನ್ನು ಮತ್ತಷ್ಟು ಜಟಿಲಗೊಳಿಸಿದೆ. ಸಿವಿಲ್ ಸೊಸೈಟಿ ಗುಂಪುಗಳಾದ ಕೋಕೋಮಿ () ಮುಂತಾದವುಗಳು ಈಗ ಬಿಜೆಪಿ ಸರ್ಕಾರದ ವಿರುದ್ಧ ಬಹಿರಂಗವಾಗಿಯೇ ಬಾಯ್ಕಾಟ್ ಘೋಷಿಸಿ ಬೀದಿಗಿಳಿದಿವೆ.

ನಾಗರಿಕರ ರಕ್ಷಣೆಗಿಂತ ಚುನಾವಣಾ ಗೆಲುವು ಮತ್ತು ಧ್ರುವೀಕರಣದ ರಾಜಕಾರಣವೇ ಮುಖ್ಯವಾದಾಗ ದೇಶದ ಒಂದು ರಾಜ್ಯ ಹೇಗೆ ಹಿಂಸಾಚಾರದ ಬೀಡಾಗಬಹುದು ಎಂಬುದಕ್ಕೆ ಮಣಿಪುರವೇ ಸಾಕ್ಷಿ. ಮಣಿಪುರಕ್ಕೆ ಈಗ ತುರ್ತಾಗಿ ಬೇಕಿರುವುದು ಕೇವಲ ಸೈನಿಕರ ನಿಯೋಜನೆಯಲ್ಲ. ಬದಲಿಗೆ ಪಕ್ಷಪಾತವಿಲ್ಲದ ಪ್ರಾಮಾಣಿಕ ರಾಜಕೀಯ ಇಚ್ಛಾಶಕ್ತಿ. ಸರ್ವಪಕ್ಷಗಳ ಮತ್ತು ಎಲ್ಲ ಸಮುದಾಯಗಳ ನಾಯಕರನ್ನು ಒಳಗೊಂಡ ಶಾಂತಿ ಮಾತುಕತೆ ನಡೆಸದ ಹೊರತು ಈ ಈಶಾನ್ಯದ ಸುಂದರ ಕಣಿವೆಯಲ್ಲಿ ಶಾಂತಿ ಮರುಕಳಿಸುವುದು ಅಸಾಧ್ಯ.

ನೀರಿಲ್ಲದೆ ಒಣಗುತ್ತಿರುವ ಕಲ್ಯಾಣ ಕರ್ನಾಟಕದ 'ಮುದಗಲ್'

ಒಂದೆಡೆ ಕಲ್ಯಾಣ ಕರ್ನಾಟಕದ ಸುಡುವ ಬೇಸಿಗೆಯ ಬಿಸಿಲು, ಮತ್ತೊಂದೆಡೆ ಗಂಟಲು ಒಣಗಿಸುವ ನೀರಿನ ಕೊರತೆ. ಈ ಎರಡರ ಮಧ್ಯೆ ಮುದಗಲ್ ಪಟ್ಟಣದ ಜನರ ಬದುಕು ಹೈರಾಣಾಗಿ ಹೋಗಿದೆ. ಸ್ವತಂತ್ರ ಭಾರತದಲ್ಲಿ, 21ನೇ ಶತಮಾನದಲ್ಲೂ ಕೇವಲ ಕುಡಿಯುವ ನೀರಿಗಾಗಿ ಜನಸಾಮಾನ್ಯರು ಬೀದಿಗಿಳಿದು ಹೋರಾಟ ಮಾಡಬೇಕಾಗಿರುವುದು ನಮ್ಮ ಆಡಳಿತ ವ್ಯವಸ್ಥೆ ಮತ್ತು ಜನಪ್ರತಿನಿಧಿಗಳ ವೈಫಲ್ಯಕ್ಕೆ ಹಿಡಿದ ಕನ್ನಡಿ.

ಒಂದೆಡೆ ಮನೆಯ ಜಗಲಿಯ ಮೇಲೆ ನೀರಿಲ್ಲದೆ ಒಣಗುತ್ತಿರುವ ಖಾಲಿ ಕೊಡಗಳ ಸಾಲು. ಮತ್ತೊಂದೆಡೆ ಅಡುಗೆ ಮನೆಯ ಸಣ್ಣ ಲೋಟದಿಂದ ಹಿಡಿದು ಕಣ್ಣಿಗೆ ಕಾಣುವ ಪ್ರತಿಯೊಂದು ಪಾತ್ರೆಯಲ್ಲೂ ತುಂಬಿಸಿಟ್ಟ ನೀರು. ಧಾನ್ಯ ಇಡಬೇಕಾಗಿದ್ದ ಬಾಕ್ಸ್‌ಗಳೂ ಸಹ ಈಗ ನೀರಿನ ಕೊಡಗಳಾಗಿ ಬದಲಾಗಿದ್ದು, ಅವುಗಳನ್ನು ಮಂಚದ ಕೆಳಗೆ, ಸಜ್ಜೆಯ ಮೇಲೆ ಮುಚ್ಚಿಡಲಾಗಿದೆ. ಅಲ್ಲಿನ ಜನರಿಗೆ ನೀರು ಬರೀ ನೀರಲ್ಲ, ಅಕ್ಷರಶಃ ಬಂಗಾರ!

ಖಾಲಿ ಕೊಡಗಳು ಜೀವಜಲವನ್ನ ತುಂಬಿಸಿಕೊಳ್ಳಲು ಕಾಯುತ್ತಿದ್ದರೆ, ಮನೆಯ ಒಳಗಿರುವ ಅಲ್ಪಸ್ವಲ್ಪ ನೀರೂ ಮುಗಿದು ಹೋದರೆ ಮುಂದೇನು ಎನ್ನುವ ಆತಂಕ ಮನೆಯ ಹಿರಿಯರದ್ದು. ನೀರಿನ ಹಾಹಾಕಾರವೇ ಮೈವೆದ್ದ ಈ ದೃಶ್ಯಗಳು ಕಂಡುಬಂದಿದ್ದು ಕಲ್ಯಾಣ ಕರ್ನಾಟಕದ ಹೆಮ್ಮೆಯ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ಮುದಗಲ್ ಪಟ್ಟಣದಲ್ಲಿ.

ಮನೆಯ ಬಾಗಿಲಲ್ಲಿ ಖಾಲಿ ಕೊಡಪಾನಗಳ ಸಾಲು

ಕುಡಿಯುವ ನೀರಿಗೂ ಈ ಪಾಟ ಪರಿತಪಿಸುವುದ ನೋಡುತ್ತಿದ್ದರೆ, ಅದು ಬರೀ ಹೆಸರಿಗಷ್ಟೇ ಕಲ್ಯಾಣ ಕರ್ನಾಟಕ ಎನಿಸುತ್ತದೆ. ನೀರಿನ ಜೊತೆಗೆ ಅಗತ್ಯ ಮೂಲಸೌಕರ್ಯಗಳು ಸರಿಯಾಗಿ ಸಿಗದೆ ಇಲ್ಲಿನ ಜನಸಾಮಾನ್ಯರು ಪ್ರತಿದಿನ ನರಕಯಾತನೆ ಅನುಭವಿಸುವಂತಾಗಿದೆ. ಕನಿಷ್ಠ ಪಕ್ಷ ಕುಡಿಯಲು ನೀರು ಸಿಕ್ಕರೆ ಸಾಕು ಜೀವನ ಸಾಗುತ್ತದೆ. ಆದರೆ, ಅದೇ ನೀರು 15 ದಿನಕ್ಕೊಮ್ಮೆ ಮಾತ್ರ ಸಿಗುವ ಭೀಕರ ಪರಿಸ್ಥಿತಿ ಎದುರಾದರೆ ಜನರ ಬದುಕು ಎಷ್ಟು ದುಸ್ತರವಾಗಬೇಡ?

ನಮ್ಮ ತಂಡ ಮುದಗಲ್ ಪಟ್ಟಣಕ್ಕೆ ಭೇಟಿ ನೀಡಿದಾಗ, ಅಲ್ಲಿನ ವಾಸ್ತವ ಸ್ಥಿತಿ ಕಣ್ಣೀರು ತರಿಸುವಂತಿತ್ತು. ಮನೆಗಳಲ್ಲಿರುವ ಸಣ್ಣ ಲೋಟದಿಂದ ಹಿಡಿದು ದೊಡ್ಡ ಡ್ರಮ್‌ಗಳವರೆಗೆ ಪ್ರತಿಯೊಂದರಲ್ಲೂ ನೀರನ್ನು ಜೀವದಂತೆ ಕಾಯ್ದಿರಿಸಲಾಗಿದೆ. ಹನಿ ಹನಿಯನ್ನೂ ಅತ್ಯಂತ ಜಾಗರೂಕತೆಯಿಂದ ಬಳಸಬೇಕಾದ ಅನಿವಾರ್ಯತೆ ಅಲ್ಲಿನದು. ಇಂದು ನೀರು ಹಿಡಿದರೆ, ಅದನ್ನು ಮುಂದಿನ 15 ದಿನಗಳವರೆಗೆ ಅತ್ಯಂತ ಮಿತವಾಗಿ ಬಳಸಲೇಬೇಕಾದ ದೊಡ್ಡ ಟಾಸ್ಕ್ ಅವರದ್ದು.

''10 ದಿನಗಳು ಕಳೆಯುತ್ತಿದ್ದಂತೆ ಸಂಗ್ರಹಿಸಿಟ್ಟ ನೀರಿನಲ್ಲಿ ಹುಳುಗಳು ಹುಟ್ಟಲು ಆರಂಭಿಸುತ್ತವೆ. ಆದರೆ ಬದುಕಬೇಕಲ್ಲವೇ? ಬೇರೆ ದಾರಿಯಿಲ್ಲದೆ, ಅನಿವಾರ್ಯವಾಗಿ ಅದೇ ನೀರನ್ನು ಬಟ್ಟೆಯಲ್ಲಿ ಸೋಸಿಕೊಂಡು ಕುಡಿಯುವ ಪರಿಸ್ಥಿತಿ ನಮ್ಮದಾಗಿದೆ'' ಎಂದು ಸ್ಥಳೀಯರು ತಮ್ಮ ನೋವು ತೋಡಿಕೊಳ್ಳುತ್ತಾರೆ.



ಸಣ್ಣ ಸಣ್ಣ ಪಾತ್ರೆಯಲ್ಲಿಯೂ ನೀರು

ಪುರಸಭೆ ವ್ಯಾಪ್ತಿಯಲ್ಲಿರುವ ಮುದಗಲ್ ಪಟ್ಟಣದಲ್ಲಿಯೇ ನೀರಿಗಾಗಿ ಇಷ್ಟೊಂದು ಹಾಹಾಕಾರವಿದ್ದರೆ, ಇನ್ನು ರಾಯಚೂರು ಭಾಗದ ಹಳ್ಳಿಗಳ ಪರಿಸ್ಥಿತಿ ದೇವರಿಗೇ ಪ್ರೀತಿ!

ಮನುಷ್ಯನಿಗೆ ಕನಿಷ್ಠ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು ಯಾವುದೇ ಸರ್ಕಾರದ ಆದ್ಯ ಕರ್ತವ್ಯ. ಆದರೆ, ಕಳೆದ 10-15 ವರ್ಷಗಳಿಂದ ರಾಯಚೂರು ಭಾಗದ ಜನರು ಇದೇ ನೀರಿನ ಸಮಸ್ಯೆಯನ್ನು ಬೆನ್ನಿಗೆ ಕಟ್ಟಿಕೊಂಡು ಬದುಕುತ್ತಿದ್ದಾರೆ. ವರ್ಷಗಳು ಉರುಳಿದವು, ಸರ್ಕಾರಗಳು ಬಂದವು, ಬೇರೆ ಬೇರೆ ರಾಜಕೀಯ ಪಕ್ಷದವರು ಅಧಿಕಾರದ ಚುಕ್ಕಾಣಿ ಹಿಡಿದರು. ಚುನಾವಣೆ ಬಂದಾಗ ಭಾರೀ ಭರವಸೆಗಳ ಮಹಾಪೂರವನ್ನೇ ಹರಿಸಿದರು. ಆದರೆ, ರಾಯಚೂರಿನ ಜನರ ದಾಹ ನೀಗಿಸುವ ಶಾಶ್ವತ ಪರಿಹಾರ ಮಾತ್ರ ಇಂದಿಗೂ ಸಿಕ್ಕೇ ಇಲ್ಲ.

''ನೀರಿನ ಭೀಕರ ಸಮಸ್ಯೆಯ ವಿರುದ್ಧ ನಾವೆಲ್ಲರೂ ಸೇರಿ ಪುರಸಭೆಯ ಎದುರು ಎಷ್ಟೋ ಬಾರಿ ಪ್ರತಿಭಟನೆ ಮಾಡಿದ್ದೇವೆ. ಆದರೂ ಆಡಳಿತ ವ್ಯವಸ್ಥೆಗೆ ಮರುಕ ಬಂದಿಲ್ಲ. ಇಂದಿಗೂ 15 ದಿನಕ್ಕೊಮ್ಮೆ ಮಾತ್ರ ನೀರು ಸರಬರಾಜು ಮಾಡಲಾಗುತ್ತಿದೆ. ಒಮ್ಮೆ ನೀರು ಬಂದರೆ, ಮುಂದಿನ ಹದಿನೈದು ದಿನಗಳ ಕಾಲ ನಮ್ಮ ಇಡೀ ಸಂಸಾರ ಅದೇ ನೀರನ್ನು ನಂಬಿ ಬದುಕಬೇಕು'' ಎಂದು ಅಸಮಾಧಾನ ವ್ಯಕ್ತಪಡಿಸುತ್ತಾರೆ ಸ್ಥಳೀಯ ನಿವಾಸಿ ವೆಂಕಟೇಶ ಹಿರೇಮನಿ.

ಈ ನೀರಿನ ಸಮಸ್ಯೆಯಿಂದಾಗಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಅತ್ಯಂತ ಹೆಚ್ಚು ತೊಂದರೆ ಅನುಭವಿಸುತ್ತಿರುವವರು ಅಲ್ಲಿನ ಮನೆಯ ಹೆಣ್ಣುಮಕ್ಕಳು. ಮುಂಜಾನೆ ಎದ್ದು ಮನೆಯ ದಿನನಿತ್ಯದ ಕೆಲಸ ಮಾಡಬೇಕು, ಮಕ್ಕಳ ಆರೈಕೆ ಮಾಡಬೇಕು, ಸಂಸಾರ ಸಾಗಿಸಲು ಗಂಡನ ಹೆಗಲಿಗೆ ಹೆಗಲು ಕೊಟ್ಟು ಹೊಲದಲ್ಲಿ ದುಡಿಯಬೇಕು. ಇಷ್ಟೆಲ್ಲಾ ಕಷ್ಟಗಳ ಮಧ್ಯೆ ಕುಡಿಯುವ ನೀರನ್ನು ಹೊಂದಿಸುವುದೇ ಅವರಿಗೆ ದೊಡ್ಡ ಸವಾಲಾಗಿದೆ.

ವಿಚಿತ್ರ ಸಂಗತಿಯೆಂದರೆ, ಕೊಡುವ ನೀರನ್ನೂ ಸರಿಯಾದ ಸಮಯಕ್ಕೆ ಕೊಡುವುದಿಲ್ಲ. ನೀರು ಬಿಡುವುದು ಮಧ್ಯರಾತ್ರಿಯಲ್ಲಿ! ಆಗಿನ್ನು ನಿದ್ರೆಗೆ ಜಾರಿ ವಿಶ್ರಾಂತಿ ಪಡೆದುಕೊಳ್ಳುವ ಅವಧಿಯಲ್ಲೂ ಹೆಣ್ಣುಮಕ್ಕಳು ನೀರಿನ ಪೈಪನ್ನ ಹತ್ತಿರವಿಟ್ಟುಕೊಂಡು, ಜಾಗರಣೆ ಮಾಡುತ್ತಾ ಮಲಗುವ ಪರಿಸ್ಥಿತಿ ನಿರ್ಮಾಣವಾಗಿದೆ.

''15 ದಿನಕ್ಕೊಮ್ಮೆ ಬರುವ ನೀರು ನಮ್ಮ ದೈನಂದಿನ ಅಗತ್ಯಕ್ಕೆ ಸಾಲುವುದೇ ಇಲ್ಲ. ಹಲವಾರು ಬಾರಿ ಅಧಿಕಾರಿಗಳಿಗೆ ಮನವಿ ಮಾಡಿದ್ದರೂ, ನಮಗೆ ಸಿಕ್ಕಿದ್ದು ಬರೀ ಆಶ್ವಾಸನೆಗಳೇ'' ಎಂದು ಮಹಿಳೆಯರು ಅಳಲು ತೋಡಿಕೊಂಡಿದ್ದಾರೆ.

ಕುಡಿಯಲು, ಅಡುಗೆಗೆ ಹಾಗೂ ಶೌಚ ಕಾರ್ಯಗಳಿಗೆ ನೀರನ್ನು ಅತ್ಯಂತ ಜಿಪುಣತನದಿಂದ ಬಳಸಬೇಕಾದ ಸ್ಥಿತಿ ಇರುವುದರಿಂದ, ಜನರ ದಿನನಿತ್ಯದ ನೆಮ್ಮದಿಯೇ ಹಾಳಾಗಿದೆ.

ಒಂದೆಡೆ ಕಲ್ಯಾಣ ಕರ್ನಾಟಕದ ಸುಡುವ ಬೇಸಿಗೆಯ ಬಿಸಿಲು, ಮತ್ತೊಂದೆಡೆ ಗಂಟಲು ಒಣಗಿಸುವ ನೀರಿನ ಕೊರತೆ. ಈ ಎರಡರ ಮಧ್ಯೆ ಮುದಗಲ್ ಪಟ್ಟಣದ ಜನರ ಬದುಕು ಹೈರಾಣಾಗಿ ಹೋಗಿದೆ. ಸ್ವತಂತ್ರ ಭಾರತದಲ್ಲಿ, 21ನೇ ಶತಮಾನದಲ್ಲೂ ಕೇವಲ ಕುಡಿಯುವ ನೀರಿಗಾಗಿ ಜನಸಾಮಾನ್ಯರು ಬೀದಿಗಿಳಿದು ಹೋರಾಟ ಮಾಡಬೇಕಾಗಿರುವುದು ನಮ್ಮ ಆಡಳಿತ ವ್ಯವಸ್ಥೆ ಮತ್ತು ಜನಪ್ರತಿನಿಧಿಗಳ ವೈಫಲ್ಯಕ್ಕೆ ಹಿಡಿದ ಕನ್ನಡಿ.

''ನಮಗೆ 15 ದಿನಕ್ಕೊಮ್ಮೆ ಅಲ್ಲ, ಕನಿಷ್ಠ 4-5 ದಿನಗಳಿಗೊಮ್ಮೆಯಾದರೂ ನೀರನ್ನು ಬಿಡಬೇಕು. ಇಲ್ಲದಿದ್ದರೆ ಮುಂದಿನ ಚುನಾವಣೆಯಲ್ಲಿ ನಾವ್ಯಾರೂ ಮತ ಚಲಾಯಿಸುವುದಿಲ್ಲ, ಸಂಪೂರ್ಣವಾಗಿ ಮತದಾನವನ್ನು ಬಹಿಷ್ಕರಿಸುತ್ತೇವೆ!'' ಎಂದು ಮುದಗಲ್ ಪಟ್ಟಣದ ಜನರು ಆಡಳಿತ ವ್ಯವಸ್ಥೆಗೆ ಕಡಾಖಂಡಿತವಾಗಿ ಎಚ್ಚರಿಕೆ ನೀಡಿದ್ದಾರೆ. ಆ ಎಚ್ಚರಿಗೆ ಯಾರ ಮೇಲೆ ಎಷ್ಟು ಪ್ರಮಾಣದ ಪರಿಣಾಮ ಬೀರುವುದೋ ಬಲ್ಲವರಾರು?

ಮುದಗಲ್ ಪುರಸಭೆ ಕಾರ್ಯಾಲಯದ ದ್ವಾರ

ಸಂಬಂಧಪಟ್ಟ ಉನ್ನತ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇನ್ನುಮುಂದೆಯಾದರೂ ಎಚ್ಚೆತ್ತುಕೊಂಡು, ಮುದಗಲ್ ಸೇರಿದಂತೆ ಕುಡಿಯುವ ನೀರಿನ ಕೊರತೆ ಇರುವ ಹಳ್ಳಿ, ಪಟ್ಟಣಗಳ ಜನರ ದಾಹವನ್ನು ತೀರಿಸಲು ತಕ್ಷಣವೇ ಶಾಶ್ವತ ಕ್ರಮ ಕೈಗೊಳ್ಳಬೇಕಿದೆ. ಜನರ ತಾಳ್ಮೆ ಮೀರುವ ಮುನ್ನ ಆಡಳಿತ ವ್ಯವಸ್ಥೆ ಸೂಕ್ತವಾಗಿ ಸ್ಪಂದಿಸಲಿ ಎಂಬುದೇ ಈದಿನ.ಕಾಮ್ ಆಶಯ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR